UNIVERSAL
LIBRARY
OU_202253
UNIVERSAL
LIBRARY

# ಈಶ್ವರಾನುರಾಗ

ಪ್ರಕಾಶಕರು :

ಶ್ರೀ ರಾಮಕೃಷ್ಣಾಶ್ರಮ

ಮೈಸೂರು.

ಮೊದಲನೆಯ ಮುದ್ರಣ
೧೯೫೦

ಪ್ರಕಾಶಕರು:
ಸ್ವಾಮಿ ಶಾಂಭವಾನಂದ, ಮೈಸೂರು

ಮುದ್ರಕರು:
ಹಿಂದೂಸ್ಥಾನ್ ಪ್ರೆಸ್, ವಾಣಿವಿಲಾಸ್ ಮೊಹಲ್ಲಾ,
ಮೈಸೂರು

# ಈಶ್ವರಾನುರಾಗ

——:o:——

ಕೆಲವು ಧರ್ಮ ಏನಹ ಉಳಿದ ಎಲ್ಲಾ ಧರ್ಮಗಳಲ್ಲಿಯೂ ಸಾಕಾರ ದೇವರಿಗೆ ಸ್ಥಾನವಿದೆ. ಜೈನ ಮತ್ತು ಬೌದ್ಧ ಧರ್ಮವನ್ನು ಬಿಟ್ಟರೆ ಬಹುಶಃ ಪ್ರಪಂಚದಲ್ಲಿರುವ ಉಳಿದ ಧರ್ಮದಲ್ಲೆಲ್ಲಾ ಸಾಕಾರ ದೇವರ ಭಾವನೆಯಿರುವುದು. ಈ ಭಾವನೆಯಿಂದ ಭಕ್ತಿ, ಪೂಜೆ ಮುಂತಾದುವು ಜನಿಸುವುವು. ಬೌದ್ಧರು ಮತ್ತು ಜೈನರಲ್ಲಿ ಸಾಕಾರ ದೇವರು ಇಲ್ಲದೇ ಇದ್ದರೂ, ತಮ್ಮ ಧರ್ಮಸ್ಥಾಪಕರನ್ನು ಇತರರು ಯಾವ ಭಾವನೆಯಿಂದ ದೇವರನ್ನು ಆರಾಧಿಸುವರೋ ಅದರಂತೆಯೇ ಆರಾಧಿಸುವರು. ನಮ್ಮ ಪ್ರೇಮವನ್ನು ಪ್ರತಿಬಿಂಬಿಸುವ, ಮಾನವನಿಗಿಂತ ಮೇಲಾದ, ಯಾವುದಾದರೊಂದು ವ್ಯಕ್ತಿಗೆ ನಾವು ತೋರುವ ಭಕ್ತಿ, ಪೂಜೆ, ಸರ್ವವ್ಯಾಪಿಯಾಗಿವೆ. ಈ ಪ್ರೀತಿ ಮತ್ತು ಭಕ್ತಿ ಹಲವು ಧರ್ಮದಲ್ಲಿ, ಬೇರೆ ಬೇರೆ ಅಂತಸ್ಥಿನಲ್ಲಿ ಹಲವು ರೀತಿ ಹಚ್ಚುಕಟಿಮ ಹಬ್ಬವೆ. ಅತ್ಯಂತ ಕೆಳಗಿನದೆ ಬಾಹ್ಯಾಚಾರ. ಅಲ್ಲಿ ಗಹನ ಭಾವನೆಗಳು ಅಸಾಧ್ಯ; ಆದರ್ಶವನ್ನು ತುಂಬಾ ಕೆಳಗೆ ಎಳೆದು ಅತಿಸ್ಥೂಲವಾಗಿಡುವರು. ಹಲವು ಆಚಾರಗಳು ರೂಢಿಗೆ ಬರುವುವು, ಜೊತೆಗೆ ಹಲವು ಚಿಹ್ನೆಗಳೂ ಬರುವುವು. ಜಗದ ಇತಿಹಾಸದಲ್ಲೆಲ್ಲಾ, ಮಾನವನು ಚಿಹ್ನೆ ಅಥವಾ ಭಾವನಾರೂಪದ ಮೂಲಕ ಸೂಕ್ಷ್ಮವನ್ನು ಗ್ರಹಿಸಲು ಪ್ರಯತ್ನಿಸುವುದನ್ನು ಕಾಣಬಹುದು. ಧರ್ಮದ ಬಾಹ್ಯಾಕಾರ ಅಂದರೆ ಜಾಗಟೆ, ಸಂಗೀತ, ಆಚಾರ, ಶಾಸ್ತ್ರ, ವಿಗ್ರಹ ಇವುಗಳೆಲ್ಲಾ ಅದರ ಕೆಳಗೆ ಬರುವುವು. ಯಾವುದು ನಮ್ಮ ಇಂದ್ರಿಯಗಳಿಗೆ ಹಿತದಾಯಕವಾಗಿವೆಯೋ, ಸೂಕ್ಷ್ಮವನ್ನು ಸ್ಥೂಲವಾಗಿ ಗ್ರಹಿಸುವುದಕ್ಕೆ ಯಾವುದು ಸಹಾಯಮಾಡುವುದೋ ಅದನ್ನು ಸ್ವೀಕರಿಸಿ ಪೂಜಿಸುವರು.

ಕಾಲಕಾಲಕ್ಕೆ ಎಲ್ಲಾ ಬಾಹ್ಯಾಚಾರ ಮತ್ತು ಚಿಹ್ನೆಯನ್ನು ವಿರೋಧಿಸಿ ನಿಂತ ಹಲವು ಸುಧಾರಕರು ಎಲ್ಲಾ ಧರ್ಮದಲ್ಲಿಯೂ ಇರು

ವರು. ಆದರೆ ಅವರ ವಿರೋಧವೆಲ್ಲಾ ವ್ಯರ್ಥವಾಯಿತು. ಎಲ್ಲಿಯವರೆಗೆ ಮಾನವ ಈಗಿನ ಸ್ಥಿತಿಯಲ್ಲಿರುವನೋ, ಅಲ್ಲಿಯವರೆವಿಗೂ ಬಹು ಜನರಿಗೆ ಗ್ರಹಿಸುವುದಕ್ಕೆ ಯಾವುದಾದರೂ ಸ್ಥೂಲವಾಗಿರುವುದೊಂದು ಬೇಕು; ತಮ್ಮ ಭಾವನೆಯನ್ನು ಸಂಗ್ರಹಿಸುವುದಕ್ಕೆ ಯಾವುದಾದರೊಂದು ನೆಲೆ ಬೇಕು; ತಮ್ಮ ಮನಸ್ಸಿನಲ್ಲಿರುವ ಭಾವನಾಕಾರಗಳಿಗೆ ಒಂದು ಕೇಂದ್ರ ಬೇಕು. ಎಲ್ಲಾ ಬಾಹ್ಯ ಸಲಕರಣೆಗಳನ್ನು ನಿರ್ಮೂಲಗೊಳಿಸಬೇಕೆಂದು ಮಹಮ್ಮದೀಯರು ಮತ್ತು ಪ್ರಾಟೆಸ್ಟೆಂಟ್ ಜನಾಂಗ ಪ್ರಯತ್ನಿಸಿತು. ಆದರೂ ಅವರಲ್ಲಿಯೂ ಈ ಭಾವನೆಗಳು ತೂರಿಬಂದಿರುವುದು ಕಾಣುವುದು. ಅವನ್ನು ಹೊರದೂಡುವುದಕ್ಕೆ ಆಗುವುದಿಲ್ಲ. ಬಹಳ ಹೋರಾಟವಾದ ಮೇಲೆ ಜನರು ಒಂದು ವಿಧದ ಬಾಹ್ಯಸಲಕರಣೆಗಳನ್ನು ಬಿಟ್ಟು ಮತ್ತೊಂದನ್ನು ಸ್ವೀಕರಿಸುವರು. ಅನ್ಯಧರ್ಮಕ್ಕೆ ಸೇರಿದ ಎಲ್ಲಾ ಬಗೆಯ ಆಚಾರ ಆಕಾರ, ವಿಗ್ರಹ, ಪೂಜೆ ಪಾಪಮಯವೆಂದು ಭಾವಿಸುವ ಮಹಮ್ಮದೀಯನು, ಕಾಬಾದಲ್ಲಿರುವ ತನ್ನ ದೇವಸ್ಥಾನಕ್ಕೆ ಬಂದಾಗ, ಅದನ್ನು ಪಾಪವೆಂದು ಪರಿಗಣಿಸುವುದಿಲ್ಲ. ಪ್ರತಿಯೊಬ್ಬ ಆಚಾರಶೀಲ ಮಹಮ್ಮದೀಯನು ತಾನು ಎಲ್ಲಿ ಪ್ರಾರ್ಥಿಸಿದರೂ ಕಾಬಾದಲ್ಲಿರುವ ದೇವಸ್ಥಾನದ ಎದುರುನಿಂತಿರುವೆನೆಂದು ಭಾವಿಸಬೇಕು. ಅಲ್ಲಿಗೆ ಅವನು ಯಾತ್ರೆಗೆಹೋದಾಗ ದೇವಸ್ಥಾನದ ಗೋಡೆಯ ಮೇಲೆ ಇರುವ ಕಪ್ಪುಕಲ್ಲನ್ನು ಚುಂಬಿಸಬೇಕು. ಕೋಟ್ಯಾಂತರ ಭಕ್ತರು ಕಲ್ಲಿಗೆ ಕೊಟ್ಟ ಚುಂಬನವೆಲ್ಲ ತೀರ್ಪನ್ನು ಕೊಡುವ ಕೊನೆಯದಿನ ಭಕ್ತರ ಉದ್ಧಾರಕ್ಕೆ ಸಾಕ್ಷಿಯಾಗಿ ಎದ್ದು ನಿಲ್ಲುವುವು. ನಂತರ ಅಲ್ಲಿ ಜಿಮ್ ಜಿಮ್ ಬಾವಿಇದೆ. ಯಾರು ಆ ಬಾವಿಯಿಂದ ಸ್ವಲ್ಪ ನೀರನ್ನು ಸೇದುವರೋ, ಅವರ ಪಾಪಪರಿಹಾರವಾಗಿ, ಪ್ರಳಯಾನಂತರ ಹೊಸದೊಂದು ದೇಹದಲ್ಲಿ ಶಾಶ್ವತವಾಗಿ ಬಾಳುವೆವೆಂದು ಮಹಮ್ಮದೀಯರು ಭಾವಿಸುವರು.

ಮತ್ತೆ ಕೆಲವರಲ್ಲಿ ಈ ವಿಧ ಚಿಹ್ನೆ ಕಟ್ಟಡದಂತೆ ಇರುವುದು. ಪ್ರಾಟೆಸ್ಟೆಂಟರು ಉಳಿದ ಎಲ್ಲಾ ಸ್ಥಳಕ್ಕಿಂತ ಚರ್ಚು ಅತಿ ಪವಿತ್ರವೆಂದು ಭಾವಿಸುವರು. ಚರ್ಚು ಒಂದು ಚಿಹ್ನೆಗೆ ನಿಂತಿರುವುದು; ಅಥವಾ ಒಂದು ಗ್ರಂಥ ಆ ಸ್ಥಾನ

ಲ್ಲಿದೆ. ಅವರಿಗೆ ಉಳಿದುದೆಲ್ಲಕ್ಕಿಂತ ಗ್ರಂಥ ಪವಿತ್ರತಮ. ಬಾಹ್ಯ ಚಿಹ್ನೆಯನ್ನು ರೋಧಿಸಿ ಬೋಧಿಸುವುದು ವ್ಯರ್ಥ. ಅದನ್ನು ಏಕೆ ನಾವು ಅಲ್ಲಗಳೆಯ ೇಕು? ಮನುಷ್ಯ ಚಿಹ್ನೆಯನ್ನು ಉಪಯೋಗಿಸದೆ ಇರುವುದಕ್ಕೆ ಆಗು ುದಿಲ್ಲ. ಚಿಹ್ನೆಗಳು ಸೂಚಿಸುವ ಭಾವನೆಗೆ ಪ್ರತಿನಿಧಿಯಹಾಗೆ ಅಂತೆಯೇ ದನ್ನು ಉಪಯೋಗಿಸುವರು. ಈ ವಿಶ್ವವೇ ಒಂದು ಚಿಹ್ನೆ. ಈ ಿಹ್ನೆಯ ಮೂಲಕ ಇದರ ಹಿಂದೆ ಮತ್ತು ಇದನ್ನು ಮೀರಿರುವ ಸತ್ಯವನ್ನು ್ರಹಿಸಲು ವಿಶ್ವದಲ್ಲಿ ಮತ್ತು ಅದರ ಮೂಲಕ ಪ್ರಯತ್ನಿಸುತ್ತಿರುವೆವು. ತ್ಮ ನಮ್ಮ ಗುರಿ, ಜಡವಸ್ತುವಲ್ಲ. ಆಕಾರ, ವಿಗ್ರಹ, ಗಂಟೆ, ದೀಪ ಾಸ್ತ್ರ, ಚರ್ಚು, ದೇವಸ್ಥಾನ ಮತ್ತು ಇತರ ಎಲ್ಲಾ ಪವಿತ್ರ ಚಿಹ್ನೆಗಳು ೆಳೆಯುತ್ತಿರುವ ಆಧ್ಯಾತ್ಮಿಕ ಸಸಿಗೆ ಒಳ್ಳೆಯವು, ಹಿತಕಾರಿ. ಆದರೆ ಇಷ್ಟೆ ದನ್ನು ಮೀರಿ ಇಲ್ಲ. ಹಲವು ಜನದಲ್ಲಿ ಸಸಿ ಬೆಳೆಯದೇ ಇರುವುದು ಾಣುವುದು. ಒಂದು ಚರ್ಚಿನಲ್ಲಿ ಹುಟ್ಟುವುದು ಒಳ್ಳೆಯದು, ಆದರೆ ಲ್ಲೇ ಸಾಯುವುದು ಕೆಟ್ಟದು. ಸಣ್ಣ ಆಧ್ಯಾತ್ಮಿಕ ಸಸಿಯ ಬೆಳವಣಿಗೆಗೆ ಹಕಾರಿಯಾದ ಕೆಲವು ಆಚಾರ ವ್ಯವಹಾರ, ಒಂದು ಬಗೆಯ ವಾತಾವರಣ ಲ್ಲಿ ಹುಟ್ಟುವುದು ಒಳ್ಳೆಯದು. ಆದರೆ ಜೀವಿ, ಆ ವಲಯದಲ್ಲೇ ಸತ್ತರೆ, ವನ ಜೀವನ ಬೆಳೆದಿಲ್ಲ, ಅವನು ಅಭಿವೃದ್ಧಿಯಾಗಿಲ್ಲವೆನ್ನುವುದನ್ನು ೋರುವುದು.

ಯಾರಾದರು ಚಿಹ್ನೆ, ಪೂಜೆ, ಆಕಾರ ಇವನ್ನು ಎಂದೆಂದಿಗೂ ಇಟ್ಟು ೊಂಡಿರಲೇಬೇಕಾದರೆ ಅದು ತಪ್ಪು. ಆದರೆ ಜೀವಿಯ ಶೈಶವಾವಸ್ಥೆಯಲ್ಲಿ ಿಹ್ನೆ ಮತ್ತು ಇತರ ಬಾಹ್ಯ ಸಲಕರಣೆಗಳು ಅದರ ಪುರೋಗಮನಕ್ಕೆ ಹಾಯವಾಗುವುದಾದರೆ ಅದು ಸರಿ. ಆದರೆ ಜೀವಿಯ ಬೆಳವಣಿಗೆ ಂದರೆ ಬುದ್ಧಿವಂತಿಕೆಯ ಬೆಳವಣಿಗೆ ಎಂದು ತಿಳಿಯಬಾರದು. ಒಬ್ಬನು ್ರಚಂಡ ಮೇಧಾವಿಯಾಗಿರಬಹುದು, ಆದರೂ ಆಧ್ಯಾತ್ಮಿಕತೆಯಲ್ಲಿ ಎಳೆ ಸುಳೆಯಂತೆ ಇರಬಹುದು. ಈ ಕ್ಷಣವೇ ಇದನ್ನು ಬೇಕಾದರೆ ರೀಕ್ಷಿಸಬಹುದು. ಎಲ್ಲರೂ ಸರ್ವವ್ಯಾಪಿಯಾದ ಭಗವಂತನನ್ನು ನಂಬ ೇಕೆಂದು ತಿಳಿದುಕೊಂಡಿರುವೆವು. ಆದರೆ ಅದನ್ನು ಆಲೋಚಿಸಲು

ಯತ್ನಿಸಿ. ಸರ್ವವ್ಯಾಪಿತ್ವದ ಅರ್ಥ ಎಷ್ಟು ಸ್ವಲ್ಪ ಜನಕ್ಕೆ ತಿಳಿಯ ಬಲ್ಲದು! ನೀವು ತುಂಬ ಪ್ರಯತ್ನಪಟ್ಟರೆ, ಸಾಗರ, ಆಕಾಶ, ವಿಶಾಲವಾದ ಹಸುರು ಬೈಲು ಅಥವಾ ಒಂದು ಮರಳುಕಾಡಿನ ಭಾವನೆ ಬರುವುದು. ಇವೆಲ್ಲ ಜಡ ಚಿತ್ರಗಳು. ಎಲ್ಲಿಯವರೆವಿಗೂ ನಾವು ಆದರ್ಶವನ್ನು ಆದರ್ಶ ದಂತೆ, ಸೂಕ್ಷ್ಮವನ್ನು ಸೂಕ್ಷ್ಮದಂತೆ, ಗ್ರಹಿಸಲಾರೆವೋ, ಅಲ್ಲಿಯವರೆ ವಿಗೂ ಈ ಆಕಾರಗಳನ್ನು, ಜಡವಿಗ್ರಹಗಳನ್ನು, ನಾವು ಅನುಸರಿಸ ಬೇಕಾಗಿದೆ. ಈ ವಿಗ್ರಹ ಮನಸ್ಸಿನ ಒಳಗೆ ಇವೆಯೇ ಅಥವಾ, ಹೊರಗೆ ಇವೆಯೇ, ಅದರಿಂದ ಅಷ್ಟು ವ್ಯತ್ಯಾಸವೇನೂ ಆಗುವುದಿಲ್ಲ. ನಾವೆಲ್ಲ ಹುಟ್ಟು ವಿಗ್ರಹಾರಾಧಕರು. ವಿಗ್ರಹಾರಾಧನೆ ಒಳ್ಳೆಯದು, ಏಕೆಂದರೆ ಇದು ಮಾನವನ ಸ್ವಭಾವ. ಯಾರು ಇದನ್ನು ಮೀರಿ ಹೋಗಬಲ್ಲರು? ಪೂರ್ಣಾತ್ಮನು ಮಾತ್ರ. ದೇವಮಾನವನು ಮಾತ್ರ. ಉಳಿದವರೆಲ್ಲಾ ವಿಗ್ರಹಾರಾಧಕರು. ಎಲ್ಲಿಯವರೆವಿಗೂ ನಮ್ಮೆದುರಿಗೆ ನಾಮರೂಪದ ವಿಶ್ವವನ್ನು ನೋಡುತ್ತಿರುವೆವೋ, ಅಲ್ಲಿಯವರೆವಿಗೂ ನಾವು ವಿಗ್ರಹಾರಾ ಧಕರು. ನಾವು ಆರಾಧಿಸುತ್ತಿರುವ ಘನವಾದ ಚಿಹ್ನೆಯೆ ಇದು. ಯಾರು ತಾನು ದೇಹವೆಂದು ಹೇಳುವನೋ, ಅವನು ಹುಟ್ಟು ವಿಗ್ರಹಾ ರಾಧಕ. ನಾವು ಆತ್ಮ, ಆತ್ಮಕ್ಕೆ ನಾಮರೂಪಗಳಿಲ್ಲ. ಆತ್ಮ ಅನಂತ ವಾದುದು, ಜಡವಸ್ತುವಲ್ಲ. ಯಾರು ತನ್ನ ನೈಜ ಸ್ಥಿತಿಯನ್ನು ಅರಿಯ ಲಾರರೋ, ಸೂಕ್ಷ್ಮವನ್ನು ತಿಳಿಯಲಾರರೋ, ಪಂಚಭೂತಗಳ ಮೂಲಕ ವಾಗಿ ದೇಹವೆಂದು ತಿಳಿದುಕೊಂಡಿರುವರೋ, ಅವರು ವಿಗ್ರಹಾರಾಧಕರು. ಆದರೂ ಜನರು ಮತ್ತೊಬ್ಬರನ್ನು ವಿಗ್ರಹಾರಾಧಕರೆಂದು ಹಳಿಯುತ್ತಾ ಎಷ್ಟು ಹೊಡೆದಾಡುವರು! ಇದನ್ನು ಬೇರೆ ಮಾತಿನಲ್ಲಿ ಹೇಳುವುದಾದರೆ ಪ್ರತಿಯೊಬ್ಬನೂ ತನ್ನ ವಿಗ್ರಹವೇ ಸತ್ಯ, ಉಳಿದವು ಮಿಥ್ಯವೆಂದು ಭಾವಿಸುವನು.

ನಾವು ಇಂತಹ ನಿಷ್ಪ್ರಯೋಜನ ಭಾವನೆಯಿಂದ ಪಾರಾಗಬೇಕು. ಧರ್ಮವೆಂದರೆ ಕೇವಲ ಸುಂದರ ಪದಸಂಯೋಜನೆಯ ಮತ ಸಿದ್ಧಾಂತ ಎಂದು ತಿಳಿದಿರುವ ಮಾತಿನ ಮುಳ್ಳಿನಿಂದ ಬಹುದೂರ ಹೋಗಬೇಕು.

ಯಾರಿಗೆ ಧರ್ಮವೆಂದರೆ, ಯುಕ್ತಿಯ ಆಧಾರದಮೇಲೆ ಒಂದು ಒಪ್ಪಿಗೆ ಅಥವಾ ವಿರೋಧವನ್ನು ಸೂಚಿಸುವುದೋ, ಯಾರಿಗೆ ತಮ್ಮ ಪುರೋಹಿತರು ಹೇಳುವ ಕೆಲವು ವಿಷಯಗಳನ್ನು ನಂಬುವುದೋ, ಯಾರಿಗೆ ಧರ್ಮವೆಂದರೆ, ತಮ್ಮ ಪೂರ್ವಿಕರ ಒಪ್ಪಿಗೆಯೋ, ಯಾರಿಗೆ ಧರ್ಮವೆಂದರೆ, ತಮ್ಮ ಜನಾಂಗವೇ ನಂಬಿಕೊಂಡಿರುವ ಕೆಲವು ಭಾವನೆ ಮತ್ತು ಮೂಢ ನಂಬಿಕೆಗೆ ಸಂಪೂರ್ಣ ಒಪ್ಪಿಗೆಯನ್ನು ಕೊಡುವುದೋ, ಅದರಿಂದ ಪಾರಾಗಬೇಕು. ಇವುಗಳನ್ನೆಲ್ಲ ಮೀರಿಹೋಗಬೇಕು. ಮಾನವಕೋಟಿಯನ್ನು ಬೆಳಕಿನೆಡೆಗೆ ಮುಂದುವರಿಯುತ್ತಿರುವ ಒಂದು ಬೃಹತ್ ವ್ಯಕ್ತಿಯ ಭೌತಿಕ ರಚನೆ ಎಂದು ಭಾವಿಸಬೇಕು. ಭಗವಂತನೆಂಬ ಅತ್ಯದ್ಭುತ ಸತ್ಯವನ್ನು ವ್ಯಕ್ತಗೊಳಿಸುತ್ತಿರುವ ಅತಿ ವಿಚಿತ್ರತರ ಈ ವಿಶ್ವ. ಇವುಗಳೆಡೆಗೆ ಮೊದಲ ಚಲನೆಯನ್ನು ಪಂಚಭೂತಗಳ ಮೂಲಕ, ಬಾಹ್ಯಾಚಾರದ ಮೂಲಕ ಮಾತ್ರ ಆಲೋಚಿಸಲು ಸಾಧ್ಯ.

ಮತಾಚರಣೆಯ ಅಂತರಾಳದಲ್ಲೆಲ್ಲಾ ಒಂದು ಮಾತ್ರ ಬಹು ಪ್ರಧಾನವಾಗಿ ಎದ್ದು ನಿಲ್ಲುವುದು. ಅದೇ ನಾಮಾರಾಧನೆ. ಯಾರು ಪುರಾತನ ಕ್ರೈಸ್ತ ಪಂಗಡದ ವಿಷಯವನ್ನು ತಿಳಿದಿರುವರೋ ಅಥವಾ ಪ್ರಪಂಚದಲ್ಲಿ ಇತರ ಧರ್ಮಗಳನ್ನು ಅಧ್ಯಯನ ಮಾಡಿರುವರೋ ಅಲ್ಲೆಲ್ಲಾ ನಾಮಾರಾಧನೆ ಇರುವುದನ್ನು ಅವರು ಲಕ್ಷ್ಯದಲ್ಲಿಟ್ಟಿರಬಹುದು. ನಾಮ ಅತಿ ಪವಿತ್ರ. ಭಗವಂತನ ಪವಿತ್ರ ನಾಮಕ್ಕೆ ಹೋಲಿಸುವಂತಹುದು ಯಾವುದೂ ಇಲ್ಲ. ಅದಕ್ಕೆ ಎಣೆಯಾದುದಿಲ್ಲವೆಂಬುದನ್ನು ಬೈಬಲಿನಲ್ಲಿ ಓದಿರುವೆವು. ಎಲ್ಲಾ ನಾಮಗಳಿಗಿಂತ ಇದು ಪವಿತ್ರೋತ್ತಮ. ಈ ಪದವೇ ದೇವರು ಎಂದು ಕೂಡ ನಂಬಿದ್ದರು. ಇದು ಸತ್ಯ. ಈ ಪ್ರಪಂಚ ನಾಮರೂಪಗಳಲ್ಲದೆ ಮತ್ತೇನು? ಪದಗಳಿಲ್ಲದೆ ನೀವು ಆಲೋಚಿಸಬಲ್ಲಿರಾ? ಪದ ಮತ್ತು ಆಲೋಚನೆಯನ್ನು ಪ್ರತ್ಯೇಕಿಸಲು ಅಸಾಧ್ಯ. ನಿಮ್ಮಲ್ಲಿ ಯಾರಿಗಾದರೂ ಅದನ್ನು ಪ್ರತ್ಯೇಕಿಸಲು ಸಾಧ್ಯವೇ ಪ್ರಯತ್ನಿಸಿ ನೋಡಿ. ನಾವು ಆಲೋಚಿಸುವಾಗಲೆಲ್ಲಾ ನಾಮರೂಪಗಳ ಮೂಲಕ ಮಾತ್ರ ಅದನ್ನು ಮಾಡುತ್ತಿರುವೆವು. ಒಂದು ಮತ್ತೊಂ

ದನ್ನು ಜ್ಞಾಪಕಕ್ಕೆ ತರುವುದು. ಆಲೋಚನೆ ಶಬ್ದವನ್ನು ತರುವುದು. ಶಬ್ದ ಆಲೋಚನೆಯನ್ನು ತರುವುದು. ಈ ವಿಶ್ವವೆಲ್ಲ ಭಗವಂತನ ಬಾಹ್ಯ ಚಿಹ್ನೆಯಂತಿದೆ. ಅದರ ಹಿಂದೆ ಅವನ ಪವಿತ್ರನಾಮ ಹುದುಗಿಧೆ. ಪ್ರತಿಯೊಂದು ದೇಹವೂ ಒಂದು ಆಕಾರ. ಆ ಪ್ರತ್ಯೇಕ ಆಕಾರದ ಹಿಂದೆ ಹೆಸರಿದೆ. ನನ್ನ ಸ್ನೇಹಿತ ಹಾಗೆ ಇರುವನು, ಹೀಗೆ ಇರುವನು, ಎಂದು ಭಾವಿಸಿದೊಡನೆ ಅವನ ಆಕಾರ ನಮಗೆ ಹೊಳೆಯುವುದು: ಆ ಸ್ನೇಹಿತನ ಆಕಾರವನ್ನು ಆಲೋಚಿಸಿದೊಡನೆಯೆ ಅವನ ಹೆಸರು ಬರುವುದು. ಮನುಷ್ಯನ ಸ್ವಭಾವವೇ ಇದು. ಮನಶ್ಶಾಸ್ತ್ರಾನುಗುಣವಾಗಿ ಹೇಳುವುದಾದರೆ, ಮನುಷ್ಯನ ಮನಸ್ಸಿನಲ್ಲಿ ರೂಪು ಇಲ್ಲವೆ ನಾಮ ಬರಲಾರದು. ಇವನ್ನು ಪ್ರತ್ಯೇಕಿಸಲು ಅಸದಳ. ಇವು ಒಂದೇ ಅಲೆಯ ಬಾಹ್ಯ ಮತ್ತು ಆಂತರಿಕ ಭಾಗ. ಆದಕಾರಣವೆ ನಾಮವನ್ನು ಜಗದಲ್ಲೆಲ್ಲಾ ಕೊಂಡಾಡಿರುವರು, ಮತ್ತು ಪೂಜಿಸಿರುವರು. ತಿಳಿದೋ, ತಿಳಿಯದೆಯೋ ಮನುಷ್ಯನಿಗೆ ಪವಿತ್ರ ನಾಮದ ಮಹಿಮೆ ದೊರಕಿದೆ.

ಹಲವು ಧರ್ಮಗಳಲ್ಲಿ ಮಹಾ ಪುರುಷರ ಆರಾಧನೆ ಇರುವುದನ್ನು ಕೂಡ ನೋಡುತ್ತೇವೆ. ಅವರು ಕೃಷ್ಣ, ಬುದ್ಧ, ಏಸು ಮುಂತಾದವರನ್ನು ಪೂಜಿಸುತ್ತಾರೆ. ನಂತರ ಮಹಾತ್ಮರ ಆರಾಧನೆ ಇರುವುದು. ಜಗತ್ತಿನಲ್ಲೆಲ್ಲಾ ಇಂತಹ ನೂರಾರು ಜನರನ್ನು ಪೂಜಿಸಿರುವರು. ಇದನ್ನು ಏತಕ್ಕೆ ಮಾಡಬಾರದು? ಬೆಳಕಿನ ಸ್ಪಂದನೆ ಎಲ್ಲೆಡೆಯಲ್ಲಿಯೂ ಇರುವುದು. ಗೂಬೆ ಅದನ್ನು ಕತ್ತಲೆಯಲ್ಲಿ ನೋಡುವುದು. ಮನುಷ್ಯನ ಕಣ್ಣಿಗೆ ಇದು ಕಾಣದೆ ಹೋದರೂ, ಅಲ್ಲಿದೆ ಎನ್ನುವುದನ್ನು ತೋರುವುದು. ಆ ಸ್ಪಂದನೆ ದೀಪದಲ್ಲಿ ಮಾತ್ರ, ಸೂರ್ಯ ಚಂದ್ರರಲ್ಲಿ ಮಾತ್ರ ಕಾಣುವುದು. ಭಗವಂತ ಸರ್ವವ್ಯಾಪಿಯಾಗಿರುವನು. ಎಲ್ಲದರಲ್ಲೂ ಆತ ಪ್ರಕಾಶಿಸುತ್ತಿರುವನು. ಆದರೆ ಮನುಷ್ಯನಿಗೆ ಅವನು ಮನುಷ್ಯನಲ್ಲಿ ಮಾತ್ರ ಗೋಚರಿಸುವನು. ಅವನ ಜ್ಯೋತಿ, ಶಕ್ತಿ, ವ್ಯಕ್ತಿ, ಮಾನವನಲ್ಲಿ ಪ್ರಕಾಶಿಸಿದಾಗ ಮಾತ್ರ ಮಾನವ ಅದನ್ನು ಗ್ರಹಿಸಬಲ್ಲ. ಆದಕಾರಣವೇ ಎಲ್ಲಾ ಕಾಲದಲ್ಲಿಯೂ ಮಾನವನು ದೇವರನ್ನು ಮಾನವನಂತೆ ಪೂಜಿಸು

ತ್ತಿರುವನು. ಅವನು ಎಲ್ಲಿಯವರೆಗೆ ಮಾನವನಾಗಿರುವನೋ ಅಲ್ಲಿಯವರೆವಿಗೂ ಅವನಿಗೆ ಹೀಗೆ ಮಾಡದೆ ವಿಧಿಯಿಲ್ಲ. ಇದನ್ನು ವಿರೋಧಿಸಬಹುದು, ಇದರಿಂದ ಪಾರಾಗಲು ಯತ್ನಿಸಬಹುದು. ಆದರೆ ಎಂದು ಅವನನ್ನು ಪಡೆಯಲು ಯತ್ನಿಸುವನೋ, ಆಗ ದೇವರನ್ನು ಮನುಷ್ಯನಂತೆ ಭಾವಿಸದೆ ಪಡೆಯಲು ಅಸಾಧ್ಯವೆಂಬುದು ಗೊತ್ತಾಗುವುದು. ಆದಕಾರಣವೆ ಪ್ರಪಂಚದಲ್ಲಿರುವ ಪ್ರತಿಯೊಂದು ಧರ್ಮದಲ್ಲಿಯೂ ಭಗವಂತನಪೂಜೆಗೆ ಸಂಬಂಧಪಟ್ಟ ಈ ಮೂರು ಭಾವನೆಗಳನ್ನು—ಚಿಹ್ನೆ, ನಾಮ, ದೇವಮಾನವರ ಆರಾಧನೆಯನ್ನು ನೋಡುತ್ತೇವೆ. ಎಲ್ಲಾ ಧರ್ಮದಲ್ಲಿಯೂ ಇವು ಇವೆ. ಆದರೆ ಒಬ್ಬರು ಮತ್ತೊಬ್ಬರೊಂದಿಗೆ ಹೋರಾಡಲಿಚ್ಛಿಸುವರು. ಒಬ್ಬನು "ನಮ್ಮ ಹೆಸರೇ ಸತ್ಯವಾದ ಹೆಸರು. ನಮ್ಮ ರೂಪೇ ಸತ್ಯವಾದ ರೂಪು. ನಮ್ಮ ಮಹಾತ್ಮರೇ ಪ್ರಪಂಚದಲ್ಲಿ ಉತ್ತಮ ಮಹಾತ್ಮರು, ನಿಮ್ಮದೆಲ್ಲ ಕಂತೆ ಪುರಾಣ" ಎನ್ನುವನು. ಈಗಿನ ಕಾಲದಲ್ಲಿ ಕ್ರೈಸ್ತ ಪಾದ್ರಿಗಳು ಸ್ವಲ್ಪ ದಯೆ ತಾಳಿ, ಹಳೆಯ ಧರ್ಮದಲ್ಲಿದ್ದ ಹಲವು ಬಗೆಯ ಆರಾಧನೆಯೆಲ್ಲ, ಮುಂದೆ ಬರಲಿರುವ ಕ್ರೈಸ್ತೋಪಾಸನೆಯ ಮುನ್ ಛಾಯೆ ಎನ್ನುವರು. ಅವರ ದೃಷ್ಟಿಯಲ್ಲಿ ಇದೊಂದೇ ಸತ್ಯವೆಂದು ಭಾವಿಸುವರು. ಹಿಂದಿನ ಕಾಲದಲ್ಲಿ ದೇವರು ಇದನ್ನೆಲ್ಲ ಸೃಷ್ಟಿಸಿ, ಇಂತಹ ಆಕಾರ ಬರುವುದಕ್ಕೆ ಪ್ರಯತ್ನಿಸಿ, ತನ್ನ ಶಕ್ತಿಯನ್ನು ಪರೀಕ್ಷಿಸಿದನು. ಇದೇ ಕ್ರೈಸ್ತ ಮತದಲ್ಲಿ ಪರ್ಯವಸಾನವಾಯಿತು. ಇದೆಷ್ಟೋ ಮುಂದೆ ಹೋದಂತೆ! ಐವತ್ತು ವರುಷಗಳ ಹಿಂದೆ ಇದನ್ನು ಕೂಡ ಅವರು ಹೇಳುತ್ತಿರಲಿಲ್ಲ. ತಮ್ಮ ಧರ್ಮವಲ್ಲದೆ ಮತ್ತಾವುದೂ ಅವರಿಗೆ ಸತ್ಯವಲ್ಲ. ಈ ಭಾವನೆ ಯಾವ ಒಂದು ಧರ್ಮ ಜನಾಂಗ, ಪಂಗಡಕ್ಕೂ ಮೀಸಲಲ್ಲ. ಎಲ್ಲರೂ ಭಾವಿಸುವುದು, ತಾವು ಏನು ಮಾಡುತ್ತಿರುವರೋ ಅದೇ ಸತ್ಯ, ಉಳಿದವರು ಇದನ್ನು ಅನುಸರಿಸಬೇಕು ಎಂದು ತಿಳಿಯುವರು. ಇಲ್ಲೇ ಭಿನ್ನಭಿನ್ನ ಧರ್ಮಗಳ ಅಧ್ಯಯನ ನಮಗೆ ಸಹಾಯ ಮಾಡುವುದು. ಯಾವ ಭಾವನೆಯನ್ನು ಇದು ನನ್ನದು, ನಮಗೆ ಮಾತ್ರ ಮೀಸಲಾಗಿರುವುದು, ಎಂದು ಭಾವಿ

ಸಿದ್ದವೊ ಅವು ನೂರಾರು ವರ್ಷಗಳ ಹಿಂದೆ ಅನ್ಯರಲ್ಲಿಯೂ ಇದ್ದವು. ಅನೇಕ ವೇಳೆ ನಮ್ಮಲಿ ಈಗ ಇರುವುದಕ್ಕಿಂತ ಅವು ಹೆಚ್ಚು ಸ್ಪಷ್ಟವಾಗಿದ್ದವು.

ಇವೇ ಭಕ್ತಿಯ ಬಾಹ್ಯ ಆಕಾರ. ಇವುಗಳ ಮೂಲಕ ಮಾನವ ಸಾಗಿ ಹೋಗಬೇಕಾಗಿದೆ. ಅವನು ನಿಜವಾಗಿಯೂ ಪ್ರಾಮಾಣಿಕನಾಗಿದ್ದರೆ ಸತ್ಯವನ್ನು ಪಡೆಯಬೇಕೆಂದು ಇಚ್ಛಿಸಿದರೆ ಇವುಗಳನ್ನು ಮೀರಿ ಹೋಗುವನು. ಅಲ್ಲಿ ಆಕಾರಕ್ಕೆ ಬೆಲೆಯಿದೆ. ದೇವಸ್ಥಾನ, ಚರ್ಚು, ಶಾಸ್ತ್ರ, ಆಚಾರ, ಇವು ಧಾರ್ಮಿಕ ಶಿಶು ವಿಹಾರಗಳು; ಮುಂದೆ ಹೆಜ್ಜೆ ಇಡಲು ಶಿಶುಗಳಿಗೆ ಶಕ್ತಿ ಕೊಡುವುದಕ್ಕೆ ಮಾತ್ರ. ಧರ್ಮ ಬೇಕಾದರೆ ಇಂತಹ ಮೊದಲ ಹೆಜ್ಜೆ ಅವಶ್ಯಕ. ಭಗವಂತನಿಗೆ ಪಡುವ ವ್ಯಾಕುಲತೆಯೊಂದಿಗೆ ನಿಜವಾದ ಭಕ್ತಿ ಬರುವುದು. ಈ ಹಂಬಲಿಕೆ ಯಾರಲ್ಲಿರುವುದು? ಅದೇ ಪ್ರಶ್ನೆ. ಧರ್ಮ ಸಿದ್ಧಾಂತದಲ್ಲಿ ಇಲ್ಲ, ಮೂಢ ನಂಬಿಕೆಯಲ್ಲಿಲ್ಲ, ವಾದದಲ್ಲಿಲ್ಲ. ಅದರಂತೆಯೇ ಇರುವುದು ಅದರಂತೆ ಆಗುವುದೇ ಧರ್ಮ. ಇದೇ ಸಾಕ್ಷಾತ್ಕಾರ. ಅನೇಕರು, ದೇವರು, ಆತ್ಮ, ಜಗದದ್ಭುತ ರಹಸ್ಯ ಮುಂತಾದ ವಿಷಯಗಳನ್ನು ಕುರಿತು ಮಾತನಾಡುವರು. ಅವರಲ್ಲಿ ಪ್ರತಿಯೊಬ್ಬರನ್ನು ನೀವು "ದೇವರನ್ನು ಕಂಡಿರುವಿರಾ? ಆತ್ಮನನ್ನು ಕಂಡಿರುವಿರಾ?" ಎಂದು ಪ್ರಶ್ನೆ ಮಾಡಿದರೆ ಎಷ್ಟು ಜನ ತಮಗೆ ಅದರ ಅನುಭವ ಇದೆ ಎಂದು ಹೇಳಬಲ್ಲರು? ಆದರೂ ಒಬ್ಬರು ಮತ್ತೊಬ್ಬರೊಂದಿಗೆ ಹೋರಾಡುತ್ತಿರುವರು. ಒಂದಾನೊಂದು ಕಾಲದಲ್ಲಿ ಭರತ ಖಂಡದಲ್ಲಿ ಭಿನ್ನ ಭಿನ್ನ ಮತಾವಲಂಬಿಗಳ ಪ್ರತಿನಿಧಿಗಳೆಲ್ಲಾ ಸೇರಿ ವಾದ ಮಾಡಲು ಮೊದಲು ಮಾಡಿದರು. ಒಬ್ಬ, ಶಿವನೇ ದೇವರೆಂದನು. ಮತ್ತೊಬ್ಬ ವಿಷ್ಣುವೇ ಆ ದೇವರು ಎಂದನು. ಹೀಗೆ ಅವರ ವಾದಕ್ಕೆ ತುದಿಯೇ ಇರಲಿಲ್ಲ. ಒಬ್ಬ ಋಷಿ ಆ ದಾರಿಯಲ್ಲಿ ಹೋಗುತ್ತಿದ್ದನು. ವಾದಿಸುತ್ತಿದ್ದವರು, ಆ ಋಷಿಯನ್ನು ಕರೆದು ತೀರ್ಪು ಕೊಡುವಂತೆ ಕೇಳಿಕೊಂಡರು. ಋಷಿ ಶಿವನೇ ದೊಡ್ಡ ದೇವರು ಎಂದು ಸಾರುತ್ತಿದ್ದವನನ್ನು ಕರೆದು "ನೀನು ಶಿವನನ್ನು ಕಂಡಿರುವೆಯಾ? ನಿನಗೆ

ಅವನ ಪರಿಚಯವಿದೆಯೆ? ಇಲ್ಲದೆ ಇದ್ದರೆ ಅವನೇ ದೊಡ್ಡ ದೇವರೆಂಬುದು ಹೇಗೆ ಗೊತ್ತು?'' ಎಂದು ಪ್ರಶ್ನಿಸಿದನು. ವಿಷ್ಣು ಭಕ್ತನನ್ನು ಕುರಿತು "ನೀನು ವಿಷ್ಣುವನ್ನು ಕಂಡಿರುವೆಯಾ?'' ಎಂದು ಕೇಳಿದನು. ಎಲ್ಲರಿಗೂ ಈ ಪ್ರಶ್ನೆಯನ್ನು ಹಾಕಿದ ಮೇಲೆ ಯಾರಿಗೂ ದೇವರ ವಿಷಯ ಗೊತ್ತಿಲ್ಲವೆಂಬುದು ಚೆನ್ನಾಗಿ ಮನದಟ್ಟಾಯಿತು. ಆದಕಾರಣವೆ ಅವರು ಅಷ್ಟು ವಾದ ಮಾಡುತ್ತಿದ್ದರು. ಅವರಿಗೆ ಏನಾದರೂ ದೇವರ ಪರಿಚಯವಿದ್ದಿದ್ದರೆ ವಾದ ಮಾಡುತ್ತಿರಲಿಲ್ಲ. ಒಂದು ಕೊಡಕ್ಕೆ ನೀರು ಬೀಳುತ್ತಿರುವಾಗ ಅದು ಶಬ್ದ ಮಾಡುವುದು. ಆದರೆ ಅದು ತುಂಬಿದ ಮೇಲೆ ಶಬ್ದವೇ ಇರುವುದಿಲ್ಲ. ಪಂಗಡಗಳಲ್ಲಿ ಇಷ್ಟೊಂದು ವಾದ ಹೋರಾಟ ಇರುವುದರಿಂದಲೇ ಧರ್ಮದ ವಿಷಯ ಅವರಿಗೆ ಏನೂ ಗೊತ್ತಿಲ್ಲ ಎಂಬುದು ವ್ಯಕ್ತವಾಗುವುದು. ಅವರಿಗೆ ಧರ್ಮವೆಂದರೆ ಕೇವಲ ಮಾತಿನ ಸೊರೆ, ಗ್ರಂಥಗಳಲ್ಲಿ ಸಂಗ್ರಹಿಸುವ ವಸ್ತು. ಪ್ರತಿಯೊಬ್ಬನೂ ಸಾಧ್ಯವಾದಷ್ಟು ದೊಡ್ಡ ಗ್ರಂಥವನ್ನು ಬರೆಯಲು ತವಕಪಡುವನು, ಹಲವಾರು ಗ್ರಂಥಗಳಿಂದ ಅದಕ್ಕೆ ವಿಷಯ ಸಂಗ್ರಹಿಸಿದರೂ ಗ್ರಂಥ ಋಣವನ್ನು ವ್ಯಕ್ತಪಡಿಸನು. ಆಗಲೆ ಗೊಂದಲದಿಂದ ತುಂಬಿತುಳುಕಾಡುವ ಜಗತ್ತಿನಲ್ಲಿ ಮತ್ತಷ್ಟು ಗದ್ದಲವೆಬ್ಬಿಸಲು ತನ್ನ ಗ್ರಂಥವನ್ನು ಬೆಳಕಿಗೆ ತರುವನು.

ಮಾನವರಲ್ಲಿ ಬಹುಪಾಲು ನಾಸ್ತಿಕರು. ಆಧುನಿಕ ಕಾಲದಲ್ಲಿ ಪಾಶ್ಚಾತ್ಯ ದೇಶದಲ್ಲಿ ಮತ್ತೊಂದು ಬಗೆಯ ನಾಸ್ತಿಕರು, ಅಂದರೆ ಜಡವಾದಿಗಳು ಬಂದಿರುವುದು ನನಗೆ ಸಂತೋಷ. ಅವರು ನಿಜವಾದ ಚಾರ್ವಾಕರು. ಧರ್ಮದ ಸೋಗಿನಲ್ಲಿರುವ ಠಕ್ಕರಾದ ನಾಸ್ತಿಕರಿಗಿಂತ ಅವರು ಮೇಲು. ಕಪಟಿಗಳು ಧರ್ಮದ ಹೆಸರಿನಲ್ಲಿ ವಾದಿಸುವರು, ಹೋರಾಡುವರು. ಆದರೂ ಅವರಿಗೆ ಧರ್ಮ ಬೇಕಾಗಿಲ್ಲ, ಅದನ್ನು ಸಾಕ್ಷಾತ್ಕಾರ ಮಾಡಿಕೊಳ್ಳಲು ಆಸೆ ಇಲ್ಲ, ಅದನ್ನು ನಿಜವಾಗಿ ತಿಳಿದುಕೊಳ್ಳಲು ಯತ್ನಿಸುವುದಿಲ್ಲ. ಕ್ರೈಸ್ತನ ಬೋಧನೆಯನ್ನು ನೆನಪಿನಲ್ಲಿಡಿ, "ಕೇಳಿ ನಿಮಗೆ ಅದು ದೊರಕುವುದು, ಅರಸಿ ಅದು ಸಿಕ್ಕುವುದು, ಬಾಗಿಲನ್ನು

ತಟ್ಟಿ, ತೆರೆಯುವುದು." ಈ ಪದಗಳು ಅಕ್ಷರಶಃ ಸತ್ಯ, ಅಲಂಕಾರವಲ್ಲ, ಕಟ್ಟು ಕಥೆಯಲ್ಲ. ಈ ಸಂದೇಶ ನಮ್ಮ ಜಗತ್ತಿಗೆ ಬಹಳ ಅಪರೂಪವಾಗಿ ಬಂದ ಭಗವಂತನ ಅತ್ಯುತ್ತಮ ಮಕ್ಕಳಲ್ಲಿ ಒಬ್ಬನಾದ, ಮಹಾಭಕ್ತಾಗ್ರಣಿಯ ಹೃದಯಾಂತರಾಳದಿಂದ ಹೊರಹೊಮ್ಮಿದುದು. ಸಾಕ್ಷಾತ್ಕಾರದ ಪರಿಣಾಮವಾಗಿ ಬಂದ ಸಂದೇಶವಿದು. ನಾವು ಕಣ್ಣೆದುರಿಗೆ ಇರುವ ಕಟ್ಟಡವನ್ನು ನೋಡುವುದಕ್ಕಿಂತ ನೂರು ಮಡಿ ಹೆಚ್ಚಾಗಿ, ದೇವರನ್ನು ಅನುಭವಿಸಿ, ಸಾಕ್ಷಾತ್ಕಾರ ಮಾಡಿಕೊಂಡು, ಆತನೊಡನೆ ಮಾತನಾಡಿ, ಬಾಳಿದ ಮಹಾ ವ್ಯಕ್ತಿಯ ಜೀವನದ ಉಸಿರಿದು. ದೇವರು ಯಾರಿಗೆ ಬೇಕು? ಅದೇ ಪ್ರಶ್ನೆ. ಪ್ರಪಂಚದಲ್ಲಿರುವ ಇಷ್ಟೊಂದು ಜನ ಸಂದಣಿಗೆ ದೇವರು ಬೇಕು, ಆದರೂ ಸಿಕ್ಕುವುದಿಲ್ಲವೆಂದು ತಿಳಿದಿರೇನು? ಅದು ಅಸಾಧ್ಯ. ಹೊರಗಿನಿಂದ ತೃಪ್ತಿಪಡಿಸಲಾಗದ ಯಾವ ಬಯಕೆ ನಮಲ್ಲಿದೆ? ಮಾನವ ಉಸಿರಾಡ ಬಯಸುವನು, ಅದಕ್ಕೇ ಗಾಳಿ ಹೊರಗೆ ಇದೆ. ಮಾನವನಿಗೆ ಊಟ ಮಾಡಲಾಸೆ, ಅದಕ್ಕೇ ಹೊರಗೆ ಆಹಾರವಿದೆ. ಈ ಬಯಕೆಯನ್ನು ಹುಟ್ಟಿಸುವುದು ಯಾವುದು? ಬಾಹ್ಯ ಜಗತ್ತಿನ ವಸ್ತುಗಳಿರುವುವು. ಬೆಳಕು ಕಣ್ಣನ್ನು ಮಾಡಿತು, ಶಬ್ದ ಕಿವಿಯನ್ನು ಮಾಡಿತು. ಮನುಷ್ಯನಲ್ಲಿರುವ ಪ್ರತಿಯೊಂದು ಆಸೆಯೂ ಹೊರಗೆ ಆಗಲೇ ಇರುವ ಯಾವುದೋ ವಸ್ತುವಿನಿಂದ ಆಯಿತು. ಪೂರ್ಣತೆಯನ್ನು ಪಡೆಯಬೇಕು, ಗುರಿಯನ್ನು ಸೇರಬೇಕು. ಪ್ರಕೃತಿಯನ್ನು ಮೀರಿಹೋಗಬೇಕೆಂಬ ಆಸೆಯನ್ನು ಮತ್ತಾವುದೋ ಹುಟ್ಟಿಸದೇ ಇದ್ದರೆ, ಮನುಷ್ಯನ ಅಂತರಾಳಕ್ಕೆ ಪ್ರವೇಶಿಸಿ ಅಲ್ಲಿ ನೆಲಸುವಂತೆ ಮಾಡದೇ ಇದ್ದರೆ, ಅದು ಹೇಗೆ ಸಾಧ್ಯ? ಯಾರಲ್ಲಿ ಈ ಹಂಬಲ ಜಾಗ್ರತವಾಗಿದೆಯೋ ಅವರು ಗುರಿ ಸೇರುವರು. ನಮಗೆ ದೇವರು ವಿನಃ ಎಲ್ಲಾ ಬೇಕು. ನಿಮ್ಮ ಸುತ್ತಲೂ ಕಾಣುವುದು ಧರ್ಮವಲ್ಲ. ನನ್ನ ಪಡಸಾಲೆಯಲ್ಲಿ ಪ್ರಪಂಚದ ನಾನಾ ಭಾಗಗಳಿಂದ ತಂದ ವಸ್ತುಗಳಿವೆ; ಈಗ ಜಪಾನ್ ದೇಶಕ್ಕೆ ಸಂಬಂಧಿಸಿದ ಕೆಲವು ವಸ್ತುಗಳನ್ನು ಅಲ್ಲಿ ಸಂಗ್ರಹಿಸಬೇಕಾಗಿದೆ. ಅದಕ್ಕೆ ಜಪಾನೀಯ ಪುಷ್ಪಕರಂಡ

ಒಂದನ್ನು ಕೊಂಡು ಯಜಮಾನಿ ಅಲ್ಲಿ ಇಡುವಳು. ಬಹುಪಾಲು ಜನರಿಗೆ ಧರ್ಮವೆಂದರೆ ಇದೆ. ಅವರಿಗೆ ಭೋಗಕ್ಕೆ ಎಲ್ಲಾ ವಸ್ತುಗಳಿವೆ. ಅದಕ್ಕೆ ಸ್ವಲ್ಪ ಧರ್ಮದ ಒಗ್ಗರಣೆಯನ್ನು ಹಾಕಿದಲ್ಲದೆ ಪೂರ್ತಿಯಾಗುವುದಿಲ್ಲ, ಏಕೆಂದರೆ ಸಮಾಜ ಟೀಕಿಸುವುದು. ಸಮಾಜ ನಿರೀಕ್ಷಿಸುವುದರಿಂದ ಅವರಿಗೆ ಸ್ವಲ್ಪ ಧರ್ಮ ಬೇಕಾಗಿದೆ. ಪ್ರಪಂಚದ ಈಗಿನ ಧಾರ್ಮಿಕ ಸ್ಥಿತಿ ಇದು.

ಶಿಷ್ಯನೊಬ್ಬ ತನ್ನ ಗುರುವಿನ ಹತ್ತಿರ ಹೋಗಿ, "ಸ್ವಾಮಿ ನನಗೆ ಧರ್ಮ ಬೇಕು" ಎಂದನು. ಗುರು ಯುವಕನನ್ನು ನೋಡಿ ಮೌನ ಮಂದಹಾಸವನ್ನು ಬೀರಿದನು. ಪ್ರತಿದಿನವೂ ಯುವಕನು ಬಂದು ಧರ್ಮ ಬೇಕೆಂದು ಕೇಳುತ್ತಿದ್ದನು. ಆದರೆ ವಯೋವೃದ್ಧ ಗುರುವಿಗೆ ಚೆನ್ನಾಗಿ ಅನುಭವವಿತ್ತು. ಒಂದು ದಿನ ತುಂಬಾ ಬಿಸಿಲಾಗಿರುವಾಗ ನದಿಗೆ ಸ್ನಾನಕ್ಕಾಗಿ ತನ್ನೊಂದಿಗೆ ಯುವಕನನ್ನು ಕರೆದುಕೊಂಡು ಹೋದನು. ಯುವಕನು ನೀರಿನಲ್ಲಿ ಮುಳುಗಿದನು. ಗುರು ನೀರಿನಲ್ಲಿ ಳಿದು ಬಲಾತ್ಕಾರವಾಗಿ ಯುವಕನನ್ನು ನೀರಿನಲ್ಲಿ ಅದುಮಿ ಹಿಡಿದು ಕೊಂಡನು. ಯುವಕನು ನೀರಿನಲ್ಲಿ ಕೆಲವು ಕ್ಷಣ ಒದ್ದಾಡಿದ ಮೇಲೆ, ಅವನನ್ನು ಹೊರಗೆ ಬಿಟ್ಟು ನೀರಿನಲ್ಲಿರುವಾಗ ಅವನಿಗೆ ಏನು ಅತ್ಯಾವಶ್ಯಕವಾಗಿತ್ತು, ಎಂದು ಪ್ರಶ್ನಿಸಿದನು. "ಒಂದು ಸ್ವಲ್ಪ ಗಾಳಿ," ಎಂದು ಉತ್ತರವಿತ್ತನು ಯುವಕ. ಈ ರೀತಿಯಲ್ಲಿ ದೇವರು ನಿಮಗೆ ಬೇಕೆ? ಹಾಗಿದ್ದರೆ ನಿಮಗೆ ಕ್ಷಣದಲ್ಲಿ ದೊರಕುವನು. ಇಂತಹ ದಾರುಣ ವ್ಯಾಕುಲತೆ ಬರುವ ಪರಿಯಂತ, ಆಸೆ ಹುಟ್ಟುವತನಕ, ನೀವು ಎಷ್ಟು ಯುಕ್ತಿ, ಶಾಸ್ತ್ರ, ಆಕಾರಗಳೊಂದಿಗೆ ಹೋರಾಡಿದರೂ ನಿಮಗೆ ಧರ್ಮ ದೊರಕಲಾರದು. ಇಂತಹ ವ್ಯಾಕುಲತೆ ನಿಮ್ಮಲ್ಲಿ ಹುಟ್ಟುವ ಪರಿಯಂತ, ಯಾವ ನಾಸ್ತಿಕನಿಗಿಂತ ನೀವು ಮೇಲಲ್ಲ. ನಾಸ್ತಿಕ ಪ್ರಾಮಾಣಿಕ ನೀವು ಅಲ್ಲ, ಅಷ್ಟೆ.

ಒಬ್ಬ ಮಹಾ ಪುರುಷ ಹೀಗೆ ಹೇಳುತ್ತಿದ್ದನು; "ಒಂದು ಕೋಣೆಯಲ್ಲಿ ಒಬ್ಬ ಕಳ್ಳನಿರುವನೆಂದು ಭಾವಿಸೋಣ. ಪಕ್ಕದ ಕೋಣೆ

ಯಲ್ಲಿ ಬೇಕಾದಷ್ಟು ದ್ರವ್ಯವಿದೆ ಎಂದು ಭಾವಿಸೋಣ. ಹೇಗೊ ಇದು ಅವನಿಗೆ ಗೊತ್ತಾಯಿತು. ಅದಕ್ಕೂ ಅವನಿಗೂ ಮಧ್ಯೆ ಒಂದು ಸಣ್ಣ ಗೋಡೆ ಮಾತ್ರ ಇದೆ ಎಂದು ಇಟ್ಟುಕೊಳ್ಳೋಣ. ಆ ಕಳ್ಳನ ಸ್ವಭಾವ ಆಗ ಹೇಗೆ ಇರುವುದು ಗೊತ್ತೆ? ಆಗ ಅವನು ನಿದ್ರಿಸಲಾರ, ಊಟ ಮಾಡಲಾರ, ಯಾವ ಕೆಲಸವನ್ನೂ ಮಾಡಲಾರ. ಅವನ ಮನಸ್ಸೆಲ್ಲಾ ಆ ದ್ರವ್ಯವನ್ನು ಹೇಗೆ ಪಡೆಯಬೇಕೆಂಬುದರ ಮೇಲೆ ಇರುವುದು. ಇಲ್ಲಿರುವ ಜನರಿಗೆಲ್ಲಾ, ಸುಖದ ಆನಂದಾತಿಶಯದ ಮಹಾಗಣಿ ಇಲ್ಲೇ ಇರುವುದೆಂಬ ನಂಬಿಕೆ ಇದ್ದರೆ, ದೇವರನ್ನು ಕಾಣುವ ಬದಲು ಅವರು ತಮ್ಮ ಕೆಲಸದಲ್ಲಿ ನಿರತರಾಗುತ್ತಿದ್ದರು, ಎಂದು ಭಾವಿಸುವಿರೇನು?" ದೇವರೊಬ್ಬನಿರುವನು ಎಂದು ಒಬ್ಬ ತಿಳಿದೊಡನೆಯೆ, ಅವನನ್ನು ಪಡೆಯಬೇಕೆಂದು ಹುಚ್ಚನಾಗಿ ಹೋಗುವನು. ಇತರರು ತಮ್ಮ ಪಾಡಿಗೆ ತಾವು ಇರಬಹುದು. ಆದರೆ ಯಾರಿಗೆ, ಇಲ್ಲಿ ತಾವು ಬಾಳುವ ಸ್ಥಿತಿಗಿಂತ ಉತ್ತಮ ಜೀವನ ಒಂದಿದೆ, ಇಂದ್ರಿಯಗಳೇ ಪರಮಾವಧಿಯಲ್ಲ, ಅದನ್ನು ಮೀರಿದ ಒಂದು ಸ್ಥಿತಿ ಇದೆ; ಜಡದೇಹವನ್ನು ಅಮೃತವೂ, ಅನಂತವೂ, ಆನಂದಮಯನಾದ ಆತ್ಮನೊಂದಿಗೆ ಹೋಲಿಸಿ ನೋಡಿದಾಗ, ಇದಕ್ಕೆ ಬೆಲೆ ಇಲ್ಲವೆನ್ನುವುದು ನಿಸ್ಸಂದೇಹವಾಗಿ ಗೊತ್ತಾದಾಗ, ತಾನೆ ಈ ಆನಂದವನ್ನು ಪಡೆಯುವ ಪರಿಯಂತವೂ ಹುಚ್ಚನಾಗಿ ಹೋಗುವನು. ಈ ಹುಚ್ಚನ್ನೇ, ಈ ದಾಹವನ್ನೇ, ಈ ಸ್ವಭಾವವನ್ನೇ, "ಧಾರ್ಮಿಕ ಜೀವನಕ್ಕೆ ಜಾಗ್ರತನಾಗುತ್ತಿರುವನು" ಎಂಬುದು. ಈ ವ್ಯಾಕುಲತೆ ಬಂದಾಗ ಮಾನವ ಧಾರ್ಮಿಕನಾಗುತ್ತಿರುವನು. ಆದರೆ ಇದಕ್ಕೆ ಬಹಳ ಕಾಲ ಬೇಕು. ಬಾಹ್ಯ ವಿಗ್ರಹ, ಆಚಾರ, ಪ್ರಾರ್ಥನೆ, ಯಾತ್ರೆ, ಶಾಸ್ತ್ರ, ಗಂಟೆ, ದೀಪ, ಪುರೋಹಿತ ಇವೆಲ್ಲ ಸನ್ನಾಹ ಮಾತ್ರ— ಜೀವದ ಕಿಲುಬನ್ನು ತೊಳೆಯುವುದು. ಜೀವ ಪವಿತ್ರವಾದಮೇಲೆ, ಸ್ವಾಭಾವಿಕವಾಗಿ ಅದು ಎಲ್ಲಾ ಪವಿತ್ರೆಯ ಮೂಲವಾದ ಭಗವಂತನಲ್ಲಿಗೆ ಹೋಗಲೆತ್ನಿಸುವುದು. ಹಲವು ಶತಮಾನಗಳಿಂದಲೂ ಧೂಳಿನಿಂದ ಆವೃತವಾದ ಕಬ್ಬಿಣದ ಚೂರು, ಅಯಸ್ಕಾಂತ ಶಿಲೆಯ ಹತ್ತಿರವಿದ್ದರೂ ಅದಕ್ಕೆ ಆಕರ್ಷಿತ

ವಾಗದೆ, ಆ ಧೂಳನ್ನು ತೊಳೆದ ತಕ್ಷಣವೇ, ಅಯಸ್ಕಾಂತ ಶಿಲೆಯಿಂದ ಆಕರ್ಷಿಸಲ್ಪಡುವಂತೆಯೇ, ಮಾನವ ಜೀವ ಹಿಂದಿನಿಂದಲೂ ಕೊಳೆ, ಕ್ರೌರ್ಯ ಪಾಪಗಳಿಂದ ಕೂಡಿದ್ದರೂ, ವಿಗ್ರಹ, ಆಚಾರ, ಪರೋಪಕಾರ, ಪ್ರೀತಿ ಮುಂತಾದುವುಗಳಿಂದ ಪರಿಶುದ್ಧವಾಗಿ, ಅದರಲ್ಲಿ ಸ್ವಭಾವತಃ ಇರುವ ಆಧ್ಯಾತ್ಮಿಕ ಆಕರ್ಷಣೆ ಜಾಗ್ರತವಾಗಿ ಭಗವಂತನೆಡೆಗೆ ಹೋಗಲು ಯತ್ನಿಸುವುದು.

ವಿಗ್ರಹ ಚಿಹ್ನೆ ಇವು ಪ್ರಾರಂಭ ಮಾತ್ರ, ಭಗವತ್ ಪ್ರೀತಿಯಲ್ಲ. ಎಲ್ಲೆಲ್ಲೂ ಪ್ರೀತಿಯ ವಿಷಯ ಮಾತನಾಡುವುದನ್ನು ಕೇಳುವೆವು. ಪ್ರತಿಯೊಬ್ಬನೂ ದೇವರನ್ನು ಪ್ರೀತಿಸಿ ಎನ್ನುವನು. ಪ್ರೀತಿ ಎಂದರೆ ಏನೆಂದು ಮನುಷ್ಯನಿಗೆ ಗೊತ್ತಿಲ್ಲ. ಅದು ಅವನಿಗೆ ಗೊತ್ತಿದ್ದರೆ ಇಷ್ಟು ಅಜಾಗರೂಕತೆಯಿಂದ ಮಾತನಾಡುತ್ತಿರಲಿಲ್ಲ. ಪ್ರತಿಯೊಬ್ಬ ಪುರುಷನೂ ತಾನು ಪ್ರೀತಿಸಬಲ್ಲೆ ಎನ್ನುವನು. ಆದರೆ ಬಹಳ ಬೇಗ ತನ್ನಲ್ಲಿ ಆ ಪ್ರೀತಿ ಇಲ್ಲವೆಂದು ತಿಳಿದುಕೊಳ್ಳುವನು. ಪ್ರತಿಯೊಬ್ಬ ಸ್ತ್ರೀಯೂ ತಾನು ಪ್ರೀತಿಸಬಲ್ಲೆ ಎಂದು ಬಗೆಯುವಳು. ಆದರೆ ಬಹಳ ಬೇಗ ಅದು ತನಗೆ ಸಾಧ್ಯವಿಲ್ಲವೆಂಬುದನ್ನು ಅರಿಯುವಳು. ಪ್ರಪಂಚವೆಲ್ಲ ಪ್ರೀತಿಯ ಮಾತಿನಿಂದ ತುಂಬಿದೆ. ಆದರೆ ಪ್ರೀತಿಸುವುದು ಬಹಳ ಕಷ್ಟ. ಪ್ರೀತಿ ಎಲ್ಲಿದೆ? ಅಲ್ಲಿ ಪ್ರೀತಿ ಇದೆ ಎಂದು ನಿನಗೆ ಹೇಗೆ ಗೊತ್ತು? ಪ್ರೀತಿಯ ಪ್ರಥಮ ಲಕ್ಷಣ ಅದಕ್ಕೆ ವ್ಯಾಪಾರ ತಿಳಿಯದು. ಎಲ್ಲಿಯವರೆವಿಗೂ ಒಬ್ಬನು ಮತ್ತೊಬ್ಬನಿಂದ ಏನನ್ನಾದರೂ ಪಡೆಯಬೇಕೆಂದು ಪ್ರೀತಿಸುತ್ತಿರುವನೋ ಅಲ್ಲಿ ಪ್ರೀತಿ ಇಲ್ಲವೆಂದು ತಿಳಿಯಿರಿ. ಅದೊಂದು ವ್ಯಾಪಾರ. ಎಲ್ಲಿ ಕೊಂಡು ಮಾರುವ ಪ್ರಶ್ನೆ ಇದೆಯೋ ಅದು ಪ್ರೀತಿಯಲ್ಲ. ಒಬ್ಬನು ದೇವರನ್ನು, "ನನಗೆ ಇದನ್ನು ಕೊಡು, ಅದನ್ನು ಕೊಡು," ಎಂದು ಪ್ರಾರ್ಥಿಸಿದಾಗ ಅದು ಪ್ರೀತಿಯಲ್ಲ. ಅದು ಹೇಗೆ ಪ್ರೀತಿಯಾಗಬಲ್ಲದು? ನಾನು ನಿಮ್ಮನ್ನು ಹೊಗಳುತ್ತೇನೆ. ನೀವು ನನಗೆ ಅದರ ಬದಲು ಏನನ್ನಾದರೂ ಕೊಡುತ್ತೀರಿ, ಇದೊಂದು ವ್ಯಾಪಾರವಷ್ಟೆ.

ಒಬ್ಬ ಪ್ರಖ್ಯಾತ ರಾಜ ಬೇಟೆಗಾಗಿ ಕಾಡಿಗೆ ಹೋದನು. ಅಲ್ಲಿ

ಒಬ್ಬ ಋಷಿಯನ್ನು ಕಂಡನು. ಆತನ ಹತ್ತಿರ ಸ್ವಲ್ಪ ಸಂಭಾಷಣೆಯಾದ ಮೇಲೆ, ಆತನನ್ನು ತುಂಬಾ ಮೆಚ್ಚಿ, ತನ್ನಿಂದ ಯಾವುದಾದರೊಂದು ಬಹುಮಾನವನ್ನು ಸ್ವೀಕರಿಸಬೇಕೆಂದು ಆ ರಾಜನು ಕೇಳಿಕೊಂಡನು. ಋಷಿಯು ಹೀಗೆಂದನು: "ಬೇಕಾಗಿಲ್ಲ, ನನ್ನ ಸ್ಥಿತಿಯಲ್ಲಿಯೇ ನಾನು ತೃಪ್ತನಾಗಿರುವೆನು. ಈ ಮರಗಳು ನನಗೆ ತಿನ್ನುವಷ್ಟು ಹಣ್ಣನ್ನು ಕೊಡುತ್ತವೆ. ಈ ಸುಂದರವಾದ ಪರಿಶುದ್ಧ ಹೊಳೆ ನನಗೆ ಬೇಕಾದ ನೀರನ್ನೆಲ್ಲಾ ಒದಗಿಸುವುದು. ನಾನು ಈ ಗುಹೆಯಲ್ಲಿ ವಾಸಿಸುವೆನು. ನೀನು ಚಕ್ರವರ್ತಿಯಾಗಿದ್ದರೂ, ನೀನು ಕೊಡುವ ಬಹುಮಾನದಿಂದ ನನಗೆ ಏನು ಪ್ರಯೋಜನ.?" ಚಕ್ರವರ್ತಿ, "ನನ್ನ ಆತ್ಮ ಶುದ್ಧಿಗಾಗಿ, ನನ್ನ ತೃಪ್ತಿಗಾಗಿ ನೀವು ಬಹುಮಾನವನ್ನು ಸ್ವೀಕರಿಸಿ, ರಾಜಧಾನಿಗೆ ಬನ್ನಿ" ಎಂದನು. ಕೊನೆಗೆ ಋಷಿ ಚಕ್ರವರ್ತಿಯೊಂದಿಗೆ ಹೋಗಲು ಒಪ್ಪಿದನು. ಆತನನ್ನು ಅರಮನೆಗೆ ಕರೆದುಕೊಂಡು ಹೋದನು. ಅಲ್ಲಿ ದ್ರವ್ಯ, ಹಲವು ಬೆಲೆಬಾಳುವ ನಗನಾಣ್ಯ, ಅಮೃತಶಿಲಾಖಚಿತ ನೆಲ, ಇದ್ದವು. ಎಲ್ಲೆಲ್ಲೂ ಐಶ್ವರ್ಯ ಮತ್ತು ರಾಜಶ್ರೀ ಕಾಣುತ್ತಿತ್ತು. ಚಕ್ರವರ್ತಿ ಋಷಿಗೆ, ತಾನು ಪ್ರಾರ್ಥನೆಮಾಡಿಕೊಂಡು ಬರುವವರೆಗೆ ಸ್ವಲ್ಪ ತಾಳಿ ಎಂದು ಹೇಳಿ, ಒಂದು ಮೂಲೆಗೆ ಹೋಗಿ ಹೀಗೆ ಪ್ರಾರ್ಥಿಸಿದನು: "ದೇವರೆ ನನಗೆ ಹೆಚ್ಚು ದ್ರವ್ಯವನ್ನು ಕೊಡು, ಹೆಚ್ಚು ಮಕ್ಕಳನ್ನು ಕೊಡು, ಹೆಚ್ಚು ರಾಜ್ಯವನ್ನು ಕೊಡು." ಈ ಮಧ್ಯೆ ಋಷಿ ಎದ್ದು ಹೊರಡುತ್ತಿದ್ದನು. ಆತನು ಹೋಗುವುದನ್ನು ಚಕ್ರವರ್ತಿ ನೋಡಿ, ಹಿಂದೆಯೇ ಹೋಗಿ, "ನಿಲ್ಲಿ ಸ್ವಾಮಿ, ನೀವು, ನನ್ನಿಂದ ಇನ್ನೂ ಏನನ್ನೂ ಸ್ವೀಕರಿಸಿಲ್ಲ. ಆಗಲೇ ಹೋಗುತ್ತಿರುವಿರಿ," ಎಂದನು. ಋಷಿ ಅವನ ಕಡೆಗೆ ತಿರುಗಿ, "ಭಿಕ್ಷುಕ ನೀನು! ನಾನು ಭಿಕ್ಷುಕರನ್ನು ಬೇಡುವುದಿಲ್ಲ. ಏನುಕೊಡಬಲ್ಲೆ, ನೀನೆ ಇದುವರೆವಿಗೂ ಬೇಡುತ್ತಿದ್ದೆ," ಎಂದನು. ಅದು ಪ್ರೀತಿಯ ಭಾಷೆ ಅಲ್ಲ. ನೀವು ದೇವರನ್ನು ಇದು ಕೊಡು, ಅದು ಕೊಡು ಎಂದು ಬೇಡಿದರೆ, ಪ್ರೀತಿಗೂ ವ್ಯಾಪಾರಕ್ಕೂ ಏನು ವ್ಯತ್ಯಾಸವಿದೆ. ಪ್ರೀತಿಯ ಮೊದಲ ಲಕ್ಷಣವೇ ಅಲ್ಲಿ ಲಾಭದ ದೃಷ್ಟಿಯಿಲ್ಲದಿರುವುದು.

ಪ್ರೀತಿ ಯಾವಾಗಲೂ ಕೊಡುವುದು, ಎಂದಿಗೂ ಸ್ವೀಕರಿಸುವುದಿಲ್ಲ. ಭಗವಂತನ ಮಗು ಹೀಗೆ ಹೇಳುವುದು: "ದೇವರಿಗೆ ಬೇಕಾದ ನನ್ನ ಸರ್ವಸ್ವವನ್ನೂ ಕೊಡುತ್ತೇನೆ. ಆದರೆ ನನಗೆ ಅವನಿಂದ ಏನೂ ಬೇಡ. ನನಗೀ ಪ್ರಪಂಚದಲ್ಲಿ ಏನೂ ಬೇಕಾಗಿಲ್ಲ. ನಾನು ಅದನ್ನು ಪ್ರೀತಿಸ ಬೇಕೆಂದು ಇರುವುದರಿಂದ ಪ್ರೀತಿಸುತ್ತೇನೆ. ನನಗೆ ಅದರಿಂದ ಯಾವ ಉಪಕಾರವೂ ಬೇಕಾಗಿಲ್ಲ. ದೇವರು ಸರ್ವಶಕ್ತನೋ ಅಲ್ಲವೋ ಯಾರಿಗೆ ಬೇಕು? ನನಗೆ ಅವನಿಂದ ಯಾವ ಶಕ್ತಿಯೂ ಬೇಕಾಗಿಲ್ಲ, ಶಕ್ತಿಯ ಆವಿರ್ಭಾವನೆಯೂ ಬೇಕಾಗಿಲ್ಲ. ಅವನು ಪ್ರೇಮಮಯ ಭಗವಂತನೆಂಬುದು ನನಗೆ ಸಾಕು. ನಾನು ಮತ್ತಾವ ಪ್ರಶ್ನೆಯನ್ನೂ ಹಾಕುವುದಿಲ್ಲ."

ಎರಡನೆಯ ಲಕ್ಷಣವೇ ಪ್ರೀತಿಗೆ ಅಂಜಿಕೆ ಇಲ್ಲ. ದೇವರೆಂದರೆ ಎಲ್ಲಿಯೋ ಮೋಡಗಳಾಚೆ ಕುಳಿತುಕೊಂಡಿರುವ ವ್ಯಕ್ತಿ; ಒಂದು ಕಯ್ಯಲ್ಲಿ ಬಹುಮಾನ, ಮತ್ತೊಂದು ಕೈಯಲ್ಲಿ ಚಾವಟಿ ಹಿಡಿದುಕೊಂಡಿರುವನು ಎಂಬ ಭಾವನೆ ಇರುವ ಪರಿಯಂತವೂ ಪ್ರೀತಿ ಇರುವುದಿಲ್ಲ. ಅಂಜಿಸಿ ಪ್ರೀತಿಸುವಂತೆ ಮಾಡಲು ಸಾಧ್ಯವೆ? ಕುರಿಮರಿ ಸಿಂಹವನ್ನು ಪ್ರೀತಿಸ ಬಲ್ಲದೆ? ಇಲಿ ಬೆಕ್ಕನ್ನು ಪ್ರೀತಿಸಬಲ್ಲದೆ? ಸೇವಕ ಸ್ವಾಮಿಯನ್ನು ಪ್ರೀತಿಸಬಲ್ಲನೆ? ಸೇವಕರು ಕೆಲವುವೇಳೆ ಪ್ರೀತಿಸುವಂತೆ ನಟಿಸುವರು. ಆದರೆ ಅದು ಪ್ರೀತಿಯೆ? ಅಂಜಿಕೆಯಲ್ಲಿ ಪ್ರೇಮವಿರುವುದನ್ನು ನೀವೆಲ್ಲಿ ನೋಡುವಿರಿ? ಅದು ಯಾವಾಗಲೂ ನಟನೆ. ಪ್ರೀತಿಯೊಂದಿಗೆ ಅಂಜಿಕೆಯ ಭಾವನೆ ಬರುವುದೇ ಇಲ್ಲ. ದಾರಿಯಲ್ಲಿರುವ ಕಿರಿಯ ತಾಯಿಯೊಬ್ಬಳನ್ನು ನೋಡಿ. ಒಂದು ನಾಯಿ ಬಗುಳಿದರೆ ಹತ್ತಿರವಿರುವ ಮನೆಗೆ ಓಡುವಳು. ಮಾರನೆ ದಿನ ಅದೇ ರಸ್ತೆಯಲ್ಲಿ ತನ್ನ ಮಗುವಿನೊಂದಿಗೆ ಇರುವಾಗ ಒಂದು ಸಿಂಹ ಮಗುವಿನ ಕಡೆ ನುಗ್ಗಿತು ಎಂದು ಭಾವಿಸೋಣ. ಆಗ ಹೆಂಗಸು ಎಲ್ಲಿರುವಳು ಎಂದು ತಿಳಿಯುವಿರಿ. ತನ್ನ ಮಗುವನ್ನು ಸಂರಕ್ಷಿಸುವುದಕ್ಕಾಗಿ ಸಿಂಹದ ದಾಡೆಯಲ್ಲಿರುವಳು. ಪ್ರೀತಿ ಅವಳ ಅಂಜಿಕೆಯನ್ನೆಲ್ಲ ಓಡಿಸಿತು. ಇದರಂತೆಯೇ ಭಗವಂತನ ಪ್ರೀತಿಕೂಡ. ದೇವರು ದುಷ್ಟನಿಗ್ರಹಿಯೋ ಶಿಷ್ಟರಕ್ಷಕನೋ ಯಾರಿಗೆ ಬೇಕು. ಅದು

ಪ್ರೀತಿಸುವವನ ಭಾವನೆ ಅಲ್ಲ. ನ್ಯಾಯಾಧಿಪತಿ ಮನೆಗೆ ಬಂದಾಗ ಅವನ ಹೆಂಡತಿ ಅವನಲ್ಲಿ ಏನನ್ನು ಕಾಣುವಳು. ನ್ಯಾಯಾಧಿಪತಿಯನ್ನು ಅಲ್ಲ, ಶಿಕ್ಷಕನನ್ನು ಅಲ್ಲ, ಬಹುಮಾನವನ್ನು ಕೊಡುವವನನ್ನೂ ಅಲ್ಲ; ತನ್ನ ಪತಿಯನ್ನು ಅಲ್ಲಿ ಕಾಣುವಳು, ಪ್ರಿಯತಮನನ್ನು ನೋಡುವಳು. ಅವನ ಮಕ್ಕಳು ಆತನಲ್ಲಿ ಏನನ್ನು ನೋಡುವುವು? ಪ್ರೀತಿಸುವ ತಂದೆಯನ್ನು; ಶಿಕ್ಷಿಸುವವನನ್ನೂ ಅಲ್ಲ, ಶ್ಲಾಘಿಸುವವನನ್ನೂ ಅಲ್ಲ. ಇದರಂತೆಯೇ ಭಗವಂತನ ಮಕ್ಕಳು. ಅವನಲ್ಲಿ ಶಿಕ್ಷಕನನ್ನು ಕಾಣುವುದಿಲ್ಲ, ಪ್ರತಿಫಲ ಕೊಡುವವನನ್ನೂ ಕಾಣುವುದಿಲ್ಲ. ಯಾರು ಪ್ರೀತಿಯ ಸವಿಯನ್ನು ಅನುಭವಿಸಿಲ್ಲವೋ ಅವರು ಅಂಜುವರು, ನಡಗುವರು. ಭಗವಂತ ಶಿಕ್ಷಿಸತಕ್ಕವನು, ಬಹುಮಾನವನ್ನು ಕೊಡುವವನು, ಎಂಬ ಭಯಂಕರ ಭಾವನೆ ಕಾಡುಮನುಷ್ಯರಿಗೆ ಸ್ವಲ್ಪ ಪ್ರಯೋಜನಕಾರಿಯಾದರೂ, ಇಂತಹ ಅಂಜಿಕೆಯನ್ನೆಲ್ಲ ಹೊರದೂಡಿ. ಕೆಲವರು ಅತಿ ಪ್ರೌಢ ಬುದ್ಧಿವಂತರಾದರೂ, ಆಧ್ಯಾತ್ಮಿಕತೆಯಲ್ಲಿ ಅನಾಗರಿಕರು, ಅವರಿಗೆ ಈ ಭಾವನೆ ಸಹಕಾರಿಯಾಗಬಹುದು. ಆದರೆ ಯಾರು ಭಕ್ತರಾಗಿರುವರೋ, ಧರ್ಮದ ಸಮೀಪಕ್ಕೆ ಬರುತ್ತಿರುವರೋ, ಯಾರಲ್ಲಿ ಆಧ್ಯಾತ್ಮಿಕ ದೃಷ್ಟಿ ಜಾಗ್ರತವಾಗಿದೆಯೋ, ಅವರು ಅಂಜಿಕೆಯ ಭಾವನೆಯನ್ನೆಲ್ಲಾ ತಿರಸ್ಕರಿಸುವರು.

ಮೂರನೆಯದು ಇದಕ್ಕಿಂತಲೂ ಹೆಚ್ಚಿನ ಪರೀಕ್ಷೆ. ಪ್ರೇಮವೇ ಅತ್ಯುತ್ತಮ ಆದರ್ಶ. ಮೊದಲನೆ ಎರಡು ಸ್ಥಿತಿಗಳನ್ನು ದಾಟಿ ಹೋದಮೇಲೆ, ವ್ಯಾಪಾರ ದೃಷ್ಟಿಯನ್ನು ತ್ಯಜಿಸಿ, ಅಂಜಿಕೆಯನ್ನು ಕಿತ್ತೊಗೆದಮೇಲೆ, ಪ್ರೇಮವೇ ಅನವರತವೂ ಪರಮೋತ್ಕೃಷ್ಟ ಆದರ್ಶವೆಂದು ತಿಳಿಯುತ್ತಾನೆ. ಎಷ್ಟುವೇಳೆ ಪ್ರಪಂಚದಲ್ಲಿ ಅತಿ ರೂಪವತಿ ಕುರೂಪಿಯಾದ ಗಂಡನನ್ನು ಪ್ರೀತಿಸುವುದನ್ನು ನಾವು ನೋಡುತ್ತೇವೆ! ಎಷ್ಟು ವೇಳೆ ಪ್ರಪಂಚದಲ್ಲಿ ಸುಂದರ ಯುವಕ ಕುರೂಪಿಯನ್ನು ಪ್ರೀತಿಸುವುದನ್ನು ನೋಡುತ್ತೇವೆ! ಇದರ ಹಿಂದೆ ಇರುವ ಆಕರ್ಷಣೆ ಯಾವುದು? ಹೊರಗಿನವರು ಸುಂದರ ಯುವಕನನ್ನೋ ಅಥವಾ ಯುವತಿಯನ್ನೋ

ನೋಡುವರು. ಆದರೆ ಪ್ರೇಮಿ ಹಾಗಲ್ಲ. ಪ್ರೇಮಿಗೆ ತನ್ನ ಪ್ರಿಯತಮೆ ಪ್ರಪಂಚದಲ್ಲಿ ಎಂದೂ ಇಲ್ಲದ ಪರಮೋತ್ಕೃಷ್ಟ ಲಾವಣ್ಯದ ಖನಿ. ಇದು ಹೇಗೆ? ವಿಕಾರಿಯನ್ನು ಪ್ರೀತಿಸುವ ನಾರಿ, ತಾನು ಪ್ರೀತಿಸುವ ಪುರುಷನಲ್ಲಿ ತನ್ನ ಪರಮೋತ್ಕೃಷ್ಟ ಲಾವಣ್ಯದ ಆದರ್ಶವನ್ನು ಆರೋಪಿಸುವಳು. ಅವಳು ಪ್ರೀತಿಸುವುದು, ಪೂಜಿಸುವುದು, ವಿಕಾರಿಯನ್ನಲ್ಲ, ತನ್ನ ಆದರ್ಶವನ್ನು. ಆ ಮನುಷ್ಯ ಒಂದು ಕೇವಲ ಭಾವ,ಸೂಚನೆ ಮಾತ್ರ. ಆ ಸೂಚನೆಯ ಮೇಲೆ ತನ್ನ ಆದರ್ಶವನ್ನೆಲ್ಲಾ ಆರೋಪಿಸಿ ಮುಚ್ಚುವಳು. ಇದು ಅವಳ ಆರಾಧನೆಯ ಇಷ್ಟ ಮೂರ್ತಿಯಾಗುವುದು. ನಾವು ಪ್ರೀತಿಸುವ ಕಡೆಯಲ್ಲೆಲ್ಲಾ, ಇದೇ ಅನ್ವಯಿಸುವುದು. ನಮ್ಮಲ್ಲಿ ಹಲವರಿಗೆ ಸಾಧಾರಣ ಲಕ್ಷಣದ ಸಹೋದರ ಸಹೋದರಿಯರು ಇರುವರು. ಆದರೂ ಅವರು ನಮ್ಮ ಸಹೋದರ ಸಹೋದರಿಯರಾದುದರಿಂದ ಸುಂದರವಾಗಿ ಕಾಣುವರು.

ಇದರ ಹಿಂದೆ ಇರುವ ತತ್ವವೇ, ಪ್ರತಿಯೊಬ್ಬನೂ, ತನ್ನ ಆದರ್ಶವನ್ನು ಆರೋಪಿಸಿ ಪೂಜಿಸುವನು ಎಂಬುದು. ಈ ಬಾಹ್ಯ ಜಗತ್ತೆಲ್ಲಾ ಒಂದು ಸೂಚನಾ ಜಗತ್ತು ಮಾತ್ರ. ನಾವು ಕಾಣುವ ಎಲ್ಲವನ್ನೂ ಮನಸ್ಸಿನಿಂದಲೇ ಆರೋಪಿಸುವೆವು. ಮುತ್ತಿನ ಹುಳುವಿನ ಚಿಪ್ಪಿನಲ್ಲಿ ಮರಳುಕಣವೊಂದು ಸೇರಿ ವೇದನೆಯುಂಟುಮಾಡುವುದು. ಈ ವೇದನೆ ಹುಳುವಿನಲ್ಲಿ ಒಂದು ವಿಧವಾದ ದ್ರವವನ್ನು ಸೃಜಿಸಿ ಮರಳ ಕಣವನ್ನು ಮುಚ್ಚುವುದು; ಇದರಿಂದಲೆ ಸುಂದರವಾದ ಮುತ್ತಾಗುವುದು. ಇದರಂತೆಯೇ ಬಾಹ್ಯ ಜಗತ್ತು ನಮಗೆ ಸೂಚನೆಯನ್ನು ಒದಗಿಸುವುದು. ಅವುಗಳಮೇಲೆ ನಮ್ಮ ಆದರ್ಶವನ್ನು ಆರೋಪಿಸಿ, ವಿಷಯಗಳನ್ನಾಗಿ ಮಾಡಿಕೊಳ್ಳುವೆವು. ದುರ್ಜನರು ಈ ಜಗತ್ತನ್ನು ನರಕಮಯವಾಗಿ ಕಾಣುವರು. ಸಜ್ಜನರು ಇದನ್ನು ಸ್ವರ್ಗಮಯವೆಂದು ಭಾವಿಸುವರು. ಪ್ರಣಯಿಗಳು ಪ್ರಪಂಚವನ್ನು ಪ್ರೀತಿಮಯವಾಗಿ ಕಾಣುವರು. ದ್ವೇಷಿ ಕರುಬಿ, ದ್ವೇಷದಿಂದ ತುಂಬಿತುಳುಕಾಡುವಂತೆ ಕಾಣುವನು. ಜಗಳ ಕಾಯುವವರಿಗೆ ಇಲ್ಲಿ ಹೋರಾಟವಲ್ಲದೆ ಮತ್ತೇನೂ ಕಾಣುವುದಿಲ್ಲ.

ಶಾಂತಾತ್ಮನಿಗೆ ಶಾಂತಿಯಲ್ಲದೆ ಮತ್ತೇನೂ ಕಾಣುವುದಿಲ್ಲ. ಪೂರ್ಣಾತ್ಮನಿಗೆ ದೇವರಲ್ಲದೆ ಮತ್ತೇನೂ ಕಾಣುವುದಿಲ್ಲ. ಹೀಗೆ ನಾವು ಯಾವಾಗಲೂ ಪೂಜಿಸುವುದು ನಮ್ಮ ಆದರ್ಶದ ಪರಾಕಾಷ್ಠತೆಯನ್ನು. ಅದನ್ನು ನಾವು ಮುಟ್ಟಿದಮೇಲೆ, ಆದರ್ಶವನ್ನು ಆದರ್ಶದಂತೆ ಪ್ರೀತಿಸಿದಮೇಲೆ, ವಾದಸಂಶಯಗಳ ತುಮುಲದಿಂದ ಒಂದೇ ಸಲ ಪಾರಾಗುವೆವು. ದೇವರನ್ನು ಹೊರಗೆ ತೋರಿಸುವುದಕ್ಕೆ ಸಾಧ್ಯವೇ ಇಲ್ಲವೆ? ಯಾರಿಗೆಬೇಕು? ಆದರ್ಶವೆಂದಿಗೂ ಕಣ್ಮರೆಯಾಗದು. ಅದು ನನ್ನ ಸ್ವಭಾವದ ಅಂಶವಾಗಿದೆ. ನನ್ನ ಇರವನ್ನೇ ನಾನು ಅನುಮಾನಿಸಿದಾಗ, ಆದರ್ಶವನ್ನು ಅನುಮಾನಿಸುತ್ತೇನೆ. ನಾನು ಮೊದಲನೆಯದನ್ನು ಹೇಗೆ ಪ್ರಶ್ನಿಸಲಾರೆನೊ, ಆದರಂತೆಯೆ ಆದರ್ಶವನ್ನೂ ಪ್ರಶ್ನಿಸಲಾರೆ. ಏಕಕಾಲದಲ್ಲಿ ದೇವರು ಸರ್ವಶಕ್ತನಾಗಿ ದಯಾಮಯನಾಗಿರಲು ಸಾಧ್ಯವೇ? ಇವೆಲ್ಲಾ ಯಾರಿಗೆಬೇಕು. ಅವನು ಮಾನವಕೋಟಿಗೆ ಮಂಗಳ ಪ್ರದಾಯಕನೋ, ಪ್ರಜಾಪೀಡಕನಂತೆ ಅವನು ನಮ್ಮನ್ನು ನೋಡುತ್ತಿರುವನೊ, ಅದು ಬೇಕಾಗಿಲ್ಲ. ಭಕ್ತ ಶಿಕ್ಷೆ ಬಹುಮಾನವನ್ನು ಮೀರಿ ಹೋಗಿರುವನು; ವೈಜ್ಞಾನಿಕ ಅಥವಾ ಮತ್ಯಾವುದಾದರೂ ರೀತಿ ಅದನ್ನು ಪ್ರದರ್ಶಿಸಲು ಸಾಧ್ಯವೇ ಎಂಬುದನ್ನು ಮೀರಿ ಹೋಗಿರುವನು. ಅವನಿಗೆ ಪ್ರೇಮಾದರ್ಶವೊಂದು ಸಾಕಾಗಿದೆ. ಈ ವಿಶ್ವ, ಪ್ರೇಮದ ಒಂದು ಆವಿರ್ಭಾವನೆಯೆಂಬುದೊಂದು ಸ್ವತಃಸಿದ್ಧ ಸಿದ್ಧಾಂತವಲ್ಲವೆ? ಈ ಒಂದು ಕಣ ಮತ್ತೊಂದು ಕಣದೊಂದಿಗೆ, ಅಣು ಅಣುವಿನೊಂದಿಗೆ ಸೇರುವಂತೆ ಮಾಡುವುದು, ಗ್ರಹಗಳು ಒಂದು ಮತ್ತೊಂದನ್ನು ಅನುಸರಿಸಿಕೊಂಡು ಹೋಗುವಂತೆ ಮಾಡುವುದು ಯಾವುದು? ಮನುಷ್ಯ ಮನುಷ್ಯನನ್ನು, ಸ್ತ್ರೀ ಪುರುಷನನ್ನು, ಪುರುಷ ಸ್ತ್ರೀಯನ್ನು, ಪ್ರಾಣಿ ಪ್ರಾಣಿಗಳನ್ನು ಆಕರ್ಷಿಸಿ, ಇಡೀ ವಿಶ್ವವನ್ನೇ ಒಂದು ಕೇಂದ್ರದ ಕಡೆ ಎಳೆಯುವಂತೆ ಮಾಡಿರುವುದು ಯಾವುದು? ಇದೇ ಪ್ರೇಮವೆನ್ನುವುದು. ಅತಿ ಕ್ಷುದ್ರಕಣದಿಂದ ಹಿಡಿದು ಪರಮೇಶ್ವರನವರೆವಿಗೂ ಇರುವುದೆಲ್ಲಾ ಇದರ ಆವಿರ್ಭಾವನೆ. ಸರ್ವ ಶಕ್ತಿಮಾನ್, ಸರ್ವವ್ಯಾಪಿ ಈ ಪ್ರೇಮ.

ಯಾವುದು ಚೇತನದಲ್ಲಿ ಅಚೇತನದಲ್ಲಿ, ವ್ಯಷ್ಟಿಯಲ್ಲಿ ಸಮಷ್ಟಿಯಲ್ಲಿ, ಪರಸ್ಪರ ಆಕರ್ಷಣೆಯಂತೆ ಇದೆಯೋ, ಅದೇ ಪ್ರೀತಿ. ಪ್ರಪಂಚದಲ್ಲಿರುವ ಏಕ ಮಾತ್ರ ಪ್ರಚೋದನ ಶಕ್ತಿ ಇದು. ಆ ಪ್ರೇಮಾಕರ್ಷಣೆಯ ಆವೇಗದಿಂದ ಮಾನವಕೋಟಿಗೆ ಕ್ರೈಸ್ತ ತನ್ನ ಪ್ರಾಣವನ್ನು ಕೊಡುವನು; ಬುದ್ಧ ಒಂದು ಪ್ರಾಣಿಗೆ ತನ್ನ ಜೀವದಾನ ಮಾಡುವನು; ತಾಯಿ ಮಗುವಿಗೆ, ಗಂಡ ಹೆಂಡತಿಗೆ ಪ್ರಾಣಕೊಡುವರು. ಅದೇ ಪ್ರೇಮಾಕರ್ಷಣದ ಉದ್ವೇಗದಿಂದಲೇ, ದೇಶಕ್ಕಾಗಿ ತಮ್ಮ ಪ್ರಾಣವನ್ನು ಈಡಾಡಲು ಜನರು ಸಿದ್ಧರಾಗಿರುವರು. ವಿಚಿತ್ರವಾಗಿ ಕಾಣಬಹುದು ಆದರೂ ಅದೇ ಪ್ರೇಮಾಕರ್ಷಣೆಗೆ ಸಿಲುಕಿಯೇ, ಕಳ್ಳ ಕದಿಯುವುದು, ಕೊಲೆಪಾತಕ ಕೊಲ್ಲುವುದು; ಇಂತಹ ಸನ್ನಿವೇಶಗಳಲ್ಲಿಯೂ ಸ್ಫೂರ್ತಿಯೊಂದೇ; ಆದರೆ ಅದರ ಆವಿರ್ಭಾವನೆಯಲ್ಲಿ ವ್ಯತ್ಯಾಸ ಕಾಣುವುದು. ಇದೊಂದೆ ಪ್ರಪಂಚದಲ್ಲಿರುವ ಏಕಮಾತ್ರ ಪ್ರಚೋದನ ಶಕ್ತಿ. ಕಳ್ಳನಿಗೆ ದ್ರವ್ಯದಮೇಲೆ ಆಸೆ. ಅಲ್ಲಿ ಪ್ರೀತಿ ಇದೆ, ಆದರೆ ಅದು ತಪ್ಪುದಾರಿಗೆ ತಿರುಗಿರುವುದು. ಹಾಗೆ ಎಲ್ಲಾ ಪುಣ್ಯ ಮತ್ತು ಪಾಪ ಕೆಲಸಗಳ ಹಿಂದೆ ಅನಂತ ಪ್ರೀತಿ ಇರುವುದು. ಸ್ವಾರ್ಥಿನ ನಿರಾಶ್ರಿತರಿಗೆ ಒಬ್ಬ ತನ್ನ ಕೋಣೆಯಲ್ಲಿ ಒಂದು ಸಾವಿರಡಾಲರಿಗೆ ಚೆಕ್ಕುಬರೆದರ ಅದೇ ಕಾಲದಲ್ಲಿ ಅದೇ ಕೋಣೆಯಲ್ಲಿ ಮತ್ತೊಬ್ಬ ಕಳ್ಳರುಜು ಹಾಕುವನು ಎಂದು ಇಟ್ಟುಕೊಳ್ಳೋಣ. ಇಬ್ಬರೂ ಒಂದೇ ಬೆಳಕಿನಲ್ಲಿ ಬರೆದರು. ಆದರೂ ಪ್ರತಿಯೊಬ್ಬನೂ ಹೇಗೆ ಅದನ್ನು ಉಪಯೋಗಿಸಿಕೊಂಡರೂ ಅದಕ್ಕೆ ಅವನೇ ಜವಾಬ್ದಾರ, ಬೆಳಕಲ್ಲ, ನಮ್ಮ ಹೊಗಳಿಕೆ ಅಥವಾ ತೆಗಳಿಕೆಗೆ ಕಾರಣ. ಎಲ್ಲದರಲ್ಲಿಯೂ ನಿಸ್ಸಂಗಿಯಾಗಿ ಪ್ರಕಾಶಿಸುತ್ತಿರುವುದು ಪ್ರೇಮ. ಇದೇ ವಿಶ್ವದ ಚಾಲನ ಶಕ್ತಿ. ಇದಿಲ್ಲದೇ ಇದ್ದರೆ ಪ್ರಪಂಚ ಕ್ಷಣಾರ್ಧದಲ್ಲಿ ನುಚ್ಚುನೂರಾಗಿ ಹೋಗುವುದು. ಈ ಪ್ರೇಮವೇ ಈಶ್ವರ.

"ಪ್ರಿಯತಮಳೆ! ಯಾರೂ ಪತಿಯನ್ನು ಪತಿಗೋಸುಗ ಪ್ರೀತಿಸುವುದಿಲ್ಲ, ಪತಿಯಲ್ಲಿರುವ ಆತ್ಮನಿಗಾಗಿ; ಯಾರೂ ಸತಿಯನ್ನು ಸತಿಗೋಸುಗ ಪ್ರೀತಿಸುವುದಿಲ್ಲ, ಸತಿಯಲ್ಲಿರುವ ಆತ್ಮಕ್ಕಾಗಿ ; ಯಾರೂ ಎಂದಿಗೂ

ಏನನ್ನೂ ಆತ್ಮನಿಗಾಗಿ ಅಲ್ಲದೆ ಅನ್ಯಥಾ ಪ್ರೀತಿಸುವುದಿಲ್ಲ." ನಿಂದಾಸ್ಪದವಾದ ಸ್ವಾರ್ಥತೆ ಕೂಡ ಪ್ರೇಮದ ಒಂದು ಅಂಶ. ಈ ಆಟದಿಂದ ಹೊರಗೆ ನಿಲ್ಲಿ, ಅದರಲ್ಲಿ ಬೆರೆಯಬೇಡಿ. ದಿವ್ಯ ದೃಶ್ಯಗಳನ್ನು ನೋಡಿ. ಅಂಕವಾದಮೇಲೆ ಅಂಕದಂತೆ ಸಾಗುತ್ತಿರುವ ಅದ್ಭುತ ಸೃಷ್ಟಿನಾಟಕವನ್ನು ನೋಡಿ. ಅದರಲ್ಲಿರುವ ಸಾಮರಸ್ಯ ಮೇಳವನ್ನು ಕೇಳಿ. ಎಲ್ಲಾ ಒಂದೇ ಪ್ರೇಮದ ಅನಂತ ದೃಶ್ಯಗಳು. ಸ್ವಾರ್ಥತೆಯಲ್ಲಿಯೂ ಆ ಜೀವ ವಿಕಾಸವಾಗುವುದು, ವಿಶಾಲವಾಗುವುದು. ಒಂದು ಜೀವಿ ಮದುವೆಯಾದ ನಂತರ ಎರಡಾಗುವುದು. ಮಕ್ಕಳಾದಮೇಲೆ ಹಲವಾಗುವುದು; ಹೀಗೆ ಮಾನವ, ಪೃಥ್ವಿಯೆಲ್ಲ ತನ್ನದಾಗುವವರಿಗೆ, ವಿಶ್ವವೇ ತನ್ನದಾಗುವವರೆಗೆ ವಿಶಾಲವಾಗುತ್ತಾ ಹೋಗುವನು. ವಿಶ್ವಪ್ರೇಮದ ಖನಿಯಾಗುವನು, ಅನಂತ ಪ್ರೇಮವಾಗುವನು. ಆ ಪ್ರೇಮವೇ ಈಶ್ವರ.

ಹೀಗೆ ಪರಾಭಕ್ತಿಗೆ ಪ್ರವೇಶಿಸುವೆವು. ಇಲ್ಲಿ ಆಕಾರ ಚಿಹ್ನೆಗಳು ಜಾರುವುವು. ಯಾರು ಅದನ್ನು ಪಡೆದಿರುವರೋ ಅವರು ಯಾವ ಪಂಗಡಕ್ಕೂ ಸೇರಲಾರರು. ಏಕೆಂದರೆ ಎಲ್ಲಾ ಪಂಗಡಗಳೂ ಅವನಲ್ಲಿರುವುವು. ಅವನು ಸೇರುವುದು ಯಾವುದಕ್ಕೆ? ಎಲ್ಲಾ ಚರ್ಚು, ದೇವಸ್ಥಾನಗಳೂ ಅವನಲ್ಲಿರುವುವು. ಅವನನ್ನು ಹಿಡಿಸುವ ದೊಡ್ಡ ಚರ್ಚು ಎಲ್ಲಿರುವುದು? ಅಂತಹ ವ್ಯಕ್ತಿ ಕೆಲವು ಆಚಾರಗಳ ಮೇರೆಯಲ್ಲಿ ಇರಲಾರ. ಯಾವ ಅನಂತ ಪ್ರೇಮದೊಂದಿಗೆ ಇವನು ಐಕ್ಯನಾಗಿರುವನೋ ಅದಕ್ಕೆ ಪರಿಮಿತಿ ಎಲ್ಲಿರುವುದು? ಈ ಪ್ರೇಮಾದರ್ಶವನ್ನು ಅನುಸರಿಸಿರುವ ಎಲ್ಲಾ ಧರ್ಮಗಳು ಅದನ್ನು ವ್ಯಕ್ತಪಡಿಸಲು ಪ್ರಯತ್ನಿಸುತ್ತವೆ. ಈ ಪ್ರೇಮ ನಮಗೆ ಪರಿಚಯನಾದರೂ ಪ್ರಪಂಚದಲ್ಲಿರುವ ಪರಸ್ಪರ ಅನುರಾಗ ಆಕರ್ಷಣೆಗಳೆಲ್ಲ ಇದರ ಆವಿರ್ಭಾವನೆ ಎಂದು ಗೊತ್ತಾದರೂ, ಎಲ್ಲಾದೇಶದ ಭಕ್ತರು ಮಹಾತ್ಮರು ಇದನ್ನು ವಿವರಿಸುವುದಕ್ಕೆ, ಭಾಷಾಶಕ್ತಿಯನ್ನೆಲ್ಲಾ ಉಪಯೋಗಿಸಿ, ಸಾಲದೆ, ಕಾಮುಕ ವಾಕ್ಸರಣಿಯನ್ನೂ ರೂಪಾಂತರಗೊಳಿಸಿ, ದೈವೀಭಾವವನ್ನು ಕೊಟ್ಟು ಪ್ರಯೋಗಿಸಿರುವರು.

ಯಹೂದ್ಯ ರಾಜಋುಷಿ ಹೀಗೆ ಹಾಡಿದನು, ಭರತಖಂಡದ ಭಕ್ತರೂ ಹೀಗೆ ಹಾಡಿದರು: "ಪ್ರಿಯತಮಳೆ! ನಿನ್ನ ಮುದ್ದು ತುಟಿಯ ಚುಂಬನ ಒಂದು! ಚುಂಬನವಾದಮೇಲೆ ಎಂದಿಗೂ ನಿನ್ನ ಮೇಲಿನ ಹಂಬಲ ಹೆಚ್ಚುವುದು! ದುಃಖಶಮನವಾಗುವುದು. ಭೂತ, ಭವಿಷ್ಯತ್, ವರ್ತಮಾನಗಳನ್ನೆಲ್ಲ ಮರೆಯುವೆನು. ನಿನ್ನನ್ನು ಮಾತ್ರ ಯೋಚಿಸುವೆನು." ಉಳಿದೆಲ್ಲ ಆಸೆಗಳು ಮಾಯವಾದಮೇಲೆ ಇರುವುದೇ ಪ್ರೇಮೋನ್ಮಾದ. "ಮುಕ್ತಿ ಯಾರಿಗೆ ಬೇಕು? ಪಾರಾಗಲು ಯಾರು ಯತ್ನಿಸುವರು? ಪೂರ್ಣರಾಗಲು ತಾನೆ ಇಚ್ಛೆ ಯಾರಿಗೆ ಇದೆ? ಸ್ವಾತಂತ್ರ್ಯ ಯಾರಿಗೆ ಬೇಕು" ಎನ್ನುವನು ಈಶ್ವರಾನುರಾಗಿ.

"ನನಗೆ ದ್ರವ್ಯ ಬೇಡ, ಆರೋಗ್ಯ ಬೇಡ, ನನಗೆ ಸೌಂದರ್ಯ ಬೇಡ, ಬುದ್ಧಿ ಬೇಡ; ಪ್ರಪಂಚದಲ್ಲಿರುವ ಹಲವು ಪಾಪಗಳ ಮಧ್ಯೆ ನಾನು ಪದೇ ಪದೇ ಜನಿಸಿದರೂ ಗೊಣಗಾಡುವುದಿಲ್ಲ. ನಾನು ನಿನ್ನನ್ನು ಪ್ರೀತಿಗೋಸುಗವಾಗಿ ಪ್ರೀತಿಸುತ್ತೇನೆ." ಹಾಡುಗಳಲ್ಲಿ ಹೊರ ದೋರುವ ಪ್ರೇಮಾಧಿಕ್ಯವಿದು, ಅತಿ ತೀವ್ರವಾದುದು. ಅತ್ಯುತ್ತಮವಾದ, ಅತಿ ಪ್ರಬಲವಾಗಿರುವ, ಆಕರ್ಷಣೀಯವಾಗಿರುವ ಮಾನವೀ ಪ್ರೇಮವೇ ಸ್ತ್ರೀಪುರುಷರ ಪರಸ್ಪರಾನುರಾಗ. ಆದಕಾರಣವೇ ಇಂತಹ ಭವ್ಯವಾದ ಭಕ್ತಿಯನ್ನು ವಿವರಿಸುವುದಕ್ಕೆ ಈ ಬಗೆಯ ಭಾಷೆಯನ್ನು ಉಪಯೋಗಿಸಿರುವರು. ಈ ಮಾನವೀಪ್ರೀತಿಯ ಉನ್ಮಾದ, ಭಕ್ತರ ದೈವೋನ್ಮಾದದ ಅತಿಕ್ಷೀಣ ಮರುಧ್ವನಿಮಾತ್ರ. ನಿಜವಾದ ಈಶ್ವರಾನುರಾಗಿಗಳು ಭಗವದ್ಭಕ್ತಿ ಎಂಬ ಅಮೃತ ಪಾನದಿಂದ ಉನ್ಮತ್ತರಾಗಬಯಸುವರು; ಈಶ್ವರಾನುರಾಗಿಗಳಾದ ಭಕ್ತರಾಗಬಯಸುವರು. ಪ್ರತಿಯೊಬ್ಬ ಧರ್ಮಾನುಯಾಯಿಯೂ ತಮ್ಮ ಇಡೀ ಸಾಧನೆಯ ಅಮೃತವನ್ನು ಧಾರೆ ಎರೆದು, ಯಾವ ಫಲಾಪೇಕ್ಷೆಯನ್ನೂ ಇಚ್ಛಿಸದೆ, ಕೇವಲ ಈಶ್ವರಾನುರಾಗ ಒಂದನ್ನೇ ತಮ್ಮ ಜೀವನದ ಚರಮ ಗುರಿಯಾಗಿ ಮಾಡಿಕೊಂಡು ಜೀವನದ ಆಕಾಂಕ್ಷೆಯ ಸಾರವನ್ನು ಸುರಿದು, ಅಣಿ ಮಾಡಿರುವ ಪ್ರೇಮಾಮೃತ ಕಲಶವನ್ನು ಹೀರಿ ಮೈ ಮರೆಯಲೆತ್ನಿಸು

ವರು ಭಕ್ತರು. ಪ್ರೀತಿಯ ಫಲ ಪ್ರೀತಿಯೊಂದೆ. ಇದು ಎಂತಹ ಪ್ರತಿ ಫಲ! ನಮ್ಮ ಜೀವನದ ದುಃಖವನ್ನೆಲ್ಲ ನೈವಾರಿಸುವುದು ಇದೊಂದೆ; ಭವರೋಗವನ್ನು ನಾಶ ಮಾಡುವ ಪಾನೀಯ ಇದೊಂದೆ. ಮಾನವ ದೈವೋನ್ಮತ್ತನಾಗುವನು, ತಾನು ಮನುಷ್ಯನೆಂಬುದನ್ನು ಮರೆಯುವನು.

ಕೊನೆಗೆ ಎಲ್ಲಾ ಬಗೆಯ ಸಿದ್ಧಾಂತಗಳು ತದಾತ್ಮೀಯತೆಯಲ್ಲಿ ಐಕ್ಯವಾಗುವುದು. ನಾವು ಯಾವಾಗಲೂ ದ್ವೈತಿಗಳಂತೆ ಪ್ರಾರಂಭಿಸು ವೆವು. ದೇವರು ಬೇರೆ, ನಾನು ಬೇರೆ. ಅನುರಾಗ ಅವರಿಬ್ಬರ ನಡುವೆ ಬರುವುದು; ಮಾನವ ದೇವರೆಡೆಗೆ ನಡೆಯುವನು, ದೇವರು ಮಾನವನ ಕಡೆಗೆ ಬಂದಂತೆ ತೋರುವುದು. ಮಾನವ ಪ್ರಪಂಚದಲ್ಲಿ, ತಂದೆಯಂತೆ, ತಾಯಿಯಂತೆ, ಸ್ನೇಹಿತನಂತೆ, ಪ್ರಣಯಿಯಂತೆ ಹಲವು- ಮಾನಸೀಯ ಭಾವಗಳಲ್ಲಿ ನುರಿತು, ಕೊನೆಗೆ ತನ್ನ ಆರಾಧನೆಯ ಇಷ್ಟ ದೈವದಲ್ಲಿ ತನ್ಮಯ ನಾದಾಗ ಪರಾಕಾಷ್ಠತೆಯನ್ನು ಮುಟ್ಟುವನು. "ನಾನೆ ನೀನು, ನೀನೆ ನಾನು, ನಿನ್ನ ಪೂಜೆಯೆ ನನ್ನ ಪೂಜೆ, ನನ್ನ ಪೂಜೆಯೆ ನಿನ್ನ ಪೂಜೆ." ಮಾನವನು ಇಲ್ಲಿ ಪ್ರಾರಂಭಿಸಿದ ಗುರಿಯ ಅಂತ್ಯ ಅಲ್ಲಿ ಸಿಕ್ಕುವುದು. ಮೊದಲು ತನಗಾಗಿ ಪ್ರೀತಿ. ಕ್ಷುದ್ರ ಜೀವನದಕಾಟ ಪ್ರೀತಿಯನ್ನು ಸ್ವಾರ್ಥವನ್ನಾಗಿಮಾಡಿತು. ಕೊನೆಗೆಪ್ರೇಮದಪೂರ್ಣಪ್ರಕಾಶ ಬೆಳಗಿತು; ಅಂದು ಕ್ಷುದ್ರಜೀವ ಪರಮಾತ್ಮನಾಯಿತು. ಮೊದಲು ಎಲ್ಲಿಯೋಹೊರಗೆ ಇರುವ ದೇವರು,ವಿಶ್ವಪ್ರೇಮವಾಗಿ ಪರಿಣಮಿಸಿತು. ಮಾನವನೂ ರೂಪಾಂ ತರ ಹೊಂದಿದನು. ಅವನೂ ದೇವರನ್ನು ಸಮೀಪಿಸುತ್ತಿದ್ದನು. ಮೊದಲು ತನ್ನಲ್ಲಿ ತುಂಬಿದ್ದ ಕೆಲಸಕ್ಕೆ ಬಾರದ ಆಸೆಗಳನ್ನೆಲ್ಲ ಹೊರಗೆ ಎಸೆಯುತ್ತ ಬಂದನು. ಆಸೆಯೊಂದಿಗೆ ಸ್ವಾರ್ಥತೆ ಮಾಯವಾಯಿತು. ತುತ್ತತುದಿ ಯಲ್ಲಿ ಪ್ರೇಯಕ, ಪ್ರೇಮ ಪ್ರೇಯಸಿ ಒಂದೆಯಾಗಿ ಕಂಡಿತು.

---

ಮೈಸೂರು

# ಶ್ರೀ ರಾಮಕೃಷ್ಣಾಶ್ರಮದ ಪ್ರಕಟನೆಗಳು

---

| | | | |
|---|---|---|---|
| ಸ್ವಾಮಿ ವಿವೇಕಾನಂದ (ಕುವೆಂಪು) | ೩ | ೮ | ೦ |
| ಶ್ರೀ ಶಾರದಾ ದೇವಿ | ೨ | ೦ | ೦ |
| ಶ್ರೀ ರಾಮಕೃಷ್ಣ (ಮಾಸ್ತಿ ವೆಂಕಟೇಶ ಐಯ್ಯಂಗಾರ್) | ೧ | ೮ | ೦ |
| ಕರ್ಮ ರಹಸ್ಯ | ೦ | ೪ | ೦ |
| ಭಕ್ತಿಯೋಗ | ೧ | ೦ | ೦ |
| ರಾಜಯೋಗ | ೨ | ೧೦ | ೦ |
| ವಿದ್ಯಾಭ್ಯಾಸ | ೦ | ೧೦ | ೦ |
| ಹಿಂದೂ ಧರ್ಮಸಾರ | ೦ | ೧೦ | ೦ |
| ವರ್ತಮಾನ ಭಾರತ | ೦ | ೧೦ | ೦ |
| ನನ್ನ ಗುರುದೇವ | ೦ | ೮ | ೦ |
| ಆರತಿ | ೦ | ೪ | ೦ |
| ತ್ರಿವೇಣೀ | ೧ | ೦ | ೦ |
| ಶಿವಶ್ಯಾಮ ನಾಮ | ೦ | ೨ | ೦ |
| ಶ್ರೀ ಗುರುದೇವರ ವಚನಗಳು | ೧ | ೦ | ೦ |
| ಚಿಕಾಗೊ ಉಪನ್ಯಾಸ | ೦ | ೬ | ೦ |
| ನನ್ನ ಜೀವನ ಮತ್ತು ಧ್ಯೇಯ | ೦ | ೪ | ೦ |
| ಈಶ್ವರಾನುರಾಗ | ೦ | ೪ | ೦ |
| ಶ್ರೀ ರಾಮಕೃಷ್ಣ ಲೀಲಾಪ್ರಸಂಗ (ಗುರುಭಾವ) | ೩ | ೦ | ೦ |
| ನಾಗಮಹಾಶಯ | ೧ | ೮ | ೦ |
| ದಿವ್ಯವಾಣಿ | ೨ | ೦ | ೦ |
| ಶ್ರೀ ರಾಮಕೃಷ್ಣ ವಚನಾಮೃತ ಭಾಗ ೧ | ೨ | ೦ | ೦ |
| ,, ,, ೨ | ೨ | ೦ | ೦ |
| Drig Drishya Viveka | ೨ | ೦ | ೦ |
| Mandukya Upanishad with Goudapada karika | ೮ | ೦ | ೦ |

---